24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 92 | ನವದೆಹಲಿ | ಬೆಲೆ ₹ 10 | ಸೆಪ್ಟೆಂಬರ್ 27 2026 ಭಾನುವಾರ

ಸಂಸ್ಕೃತಿ ವಿಕಾಸ ಮಾನವ ವಿಕಾಸ

## ಡಾ. ಸಿ. ಸೋಮಶೇಖರ – ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ (ರಿ), ಬೆಂಗಳೂರು

ಸ್ಥಾಪನೆ : 2015



**ದಿವ್ಯ ಸಾನಿಧ್ಯ**

ಪರಮ ಪೂಜ್ಯ ಜಗದ್ಗುರುಗಳಾದ
ಶ್ರೀಶ್ರೀಶ್ರೀ ಡಾ. ನಿರ್ಮಲಾನಂದ ನಾಥ ಮಹಾಸ್ವಾಮಿಗಳು
ಪೀಠಾಧ್ಯಕ್ಷರು,
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಜೀವಮಾನ ಸಾಧನೆಗಾಗಿ
ನಾಡಿನ ಹಿರಿಯ ಸಾಧಕರಿಗೆ

# ಸಂಸ್ಕೃತಿ ಸಂಗಮ-2026

## ಪ್ರಶಸ್ತಿ ಪ್ರದಾನ ಸಮಾರಂಭ

ದಿನಾಂಕ : 28ನೇ ಸೆಪ್ಟೆಂಬರ್ 2026, ಸೋಮವಾರ ಸಂಜೆ 5:30ಕ್ಕೆ
ಸ್ಥಳ: ಗಾಂಧೀ ಭವನ ಕುಮಾರ ಕೃಪ ರಸ್ತೆ ಬೆಂಗಳೂರು.



ಉದ್ಘಾಟನೆ ಮತ್ತು "ಸಂಸ್ಕೃತಿ ಸಂಗಮ" ಪ್ರಶಸ್ತಿ ಪ್ರದಾನ
**ಸನ್ಮಾನ್ಯ ಡಾ. ಜಿ. ಪರಮೇಶ್ವರ**
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಅಧ್ಯಕ್ಷತೆ
**ಸನ್ಮಾನ್ಯ ನ್ಯಾ. ಡಾ. ಶಿವರಾಜ್ ವಿ. ಪಾಟೀಲ್**
ವಿಶ್ರಾಂತ ನ್ಯಾಯಮೂರ್ತಿಗಳು
ಭಾರತ ಸರ್ವೋಚ್ಚ ನ್ಯಾಯಾಲಯ



"ಸಂಸ್ಕೃತಿ ಸಂಗಮ" ವಿಶೇಷ ಸಂಚಿಕೆ ಬಿಡುಗಡೆ
**ಸನ್ಮಾನ್ಯ ಶ್ರೀ ಶಂಕರ್ ಬಿದರಿ** ಐ.ಪಿ.ಎಸ್(ನಿ)
ನಿವೃತ್ತ ಪೋಲಿಸ್ ಮಹಾ ನಿರ್ದೇಶಕರು
ಕರ್ನಾಟಕ ಸರ್ಕಾರ



ಡಾ.ಸಿ ಸೋಮಶೇಖರ ಅವರ
'ಮಾತೆಂಬುದು ಜ್ಯೋತಿರ್ಲಿಂಗ'
(ಮೂರನೇ ಆವೃತ್ತಿ ) ಕೃತಿ ಬಿಡುಗಡೆ
**ಸನ್ಮಾನ್ಯ ಡಾ. ನಾಡೋಜ ವೂಡೇ ಪಿ. ಕೃಷ್ಣ**
ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಬೆಂಗಳೂರು



ಸ್ವಾಗತ ಮತ್ತು ಪ್ರಾಸ್ತಾವಿಕ :
**ಡಾ. ಸಿ. ಸೋಮಶೇಖರ** ಭಾ.ಆ.ಸೇ. (ನಿ)
ಪ್ರತಿಷ್ಠಾನದ ಅಧ್ಯಕ್ಷರು


ಸಂಜೆ : 4:30ಕ್ಕೆ ಜಾನಪದ ಗೀತ ಗಾಯನ :
ಡಾ.ಅಪ್ಪಗೆರೆ ತಿಮ್ಮರಾಜು ರವರಿಂದ, ಪ್ರಖ್ಯಾತ ಗಾಯಕರು.
ನಿರೂಪಣೆ : ಶ್ರೀಮತಿ ದಿವ್ಯ ಆಲೂರು, ಪ್ರಖ್ಯಾತ ನಿರೂಪಕಿ

**ಸರ್ವರಿಗೂ ಆತ್ಮೀಯ ಸ್ವಾಗತ**

## 'ಸಂಸ್ಕೃತಿ ಸಂಗಮ' –2026 ಪ್ರಶಸ್ತಿ ಪುರಸ್ಕೃತರು



**ಶ್ರೀ ಡಾ.ಕೆ.ವಿ.ನಾಗರಾಜ ಮೂರ್ತಿ**
ಹಿರಿಯ ರಂಗಕರ್ಮಿ
ಸಾಂಸ್ಕೃತಿ ಸಂಘಟನೆ




**ಶ್ರೀ ಡಾ.ಎಚ್.ಎಸ್.ಮುರಳೀಧರ**
ದಾಸ ಸಾಹಿತ್ಯ



**ಶ್ರೀ ಡಾ.ಅಪ್ಪಗೆರೆ ತಿಮ್ಮರಾಜು**
ಹಿರಿಯ ಗಾಯಕರು,
ಜಾನಪದ ಸಾಹಿತ್ಯ



**ಶ್ರೀಮತಿ ಡಾ.ಎಂ.ಎಸ್.ಆಶಾದೇವಿ**
ವಚನ ಸಾಹಿತ್ಯ ಕ್ಷೇತ್ರ



**ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ**
ಸಂಗೀತ ಕ್ಷೇತ್ರ ಮತ್ತು
ವಿಶಿಷ್ಟ ಸಾಧನೆ ಮತ್ತು ಸೇವೆ

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ


ಸೆಪ್ಟಂಬರ್ 27 2026 ಭಾನುವಾರ

# ಚುನಾವಣಾ ಆಯೋಗ ಮತಗಳ್ಳತನದ ಪಾಲುದಾರ: ಡಿ.ಕೆ. ಶಿವಕುಮಾರ್

**ಬೆಂಗಳೂರು, ಸೆ.26:** ಚುನಾವಣಾ ಆಯೋಗ ಬಿಜೆಪಿಯ ಕೈಗೊಂಬೆಯಾಗಿದೆ. ಬಡ ಹಾಗೂ ಆಡಳಿತ ವ್ಯವಸ್ಥೆ ಟೀಕಿಸುವ ಮತದಾರರ ಹೆಸರನ್ನು ಗುರಿಯಾಗಿಸಲಾಗಿದೆ. ಬಿಜೆಪಿ ಜೊತೆ ಸೇರಿ ಮತಗಳ್ಳತನಕ್ಕೆ ಪಾಲುದಾರರಾಗಿದ್ದಾರೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರ ರಾಜೀನಾಮೆ ಆಗ್ರಹಿಸಿ ಕೆಪಿಸಿಸಿ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶನಿವಾರ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿ, ರಾಷ್ಟ್ರಪತಿಗಳು ಮಧ್ಯಪ್ರವೇಶಿಸಿ ಚುನಾವಣಾ ಆಯೋಗವನ್ನು ವಿಸರ್ಜಿಸಬೇಕು. ಮುಖ್ಯ ಆಯುಕ್ತರನ್ನು ಬಂಧಿಸಬೇಕು ಹಾಗೂ ಅಕ್ರಮವಾಗಿ ನಡೆದ ಚುನಾವಣೆಗಳನ್ನು ರದ್ದು ಮಾಡಬೇಕು. ಸಂವಿಧಾನದ ಮೂಲಕ ಈ ದೇಶದ ಚುನಾವಣಾ ಆಯೋಗಕ್ಕೆ ಸ್ವಾಯತ್ತತೆ ಅಧಿಕಾರ ನೀಡಲಾಗಿತ್ತು. ಅದನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ. ಇದಕ್ಕೆ ಸೂಕ್ತ ಸಾಕ್ಷಿಗಳೂ ಕಾಣುತ್ತಿವೆ ಎಂದರು. ಜ್ಞಾನೇಶ್‌ಕುಮಾರ್ ಅವರು ಚೀಫ್ ಎಲೆಕ್ಷನ್ ಕಮೀಷನರ್ ಅಲ್ಲ, ಚೀಫ್ ಸೆಲೆಕ್ಷನ್ ಕಮೀಷನರ್ ಆಗಿದ್ದೀರಿ. ಜನ ನಿಮ್ಮ ಅನ್ಯಾಯಗಳ ವಿರುದ್ಧ ದಂಗೆ ಏಳುತ್ತಾರೆ. ಕೇಂದ್ರ ಸರ್ಕಾರ ಅಧಿವೇಶನ ಕರೆದು ಇದರ ಬಗ್ಗೆ ಶೀಘ್ರ ಚರ್ಚೆ ನಡೆಸಬೇಕು. ಅಧಿಕಾರದ ವ್ಯಾಮೋಹ ಜಾಸ್ತಿ ದಿನ ಇರುವುದಿಲ್ಲ. ಹುಟ್ಟಿದ ಸೂರ್ಯ ಮುಳುಗಲೇಬೇಕು. ಈಗ ನಡೆದಿರುವ ಎಸ್‌ಐಆರ್ ರದ್ದುಗೊಳ್ಳಬೇಕು. ಹೊಸದಾಗಿ ಮರುಪರಿಶೀಲನೆ ನಡೆಯಬೇಕು ಎಂದರು.

## ಚುನಾವಣಾ ಆಯೋಗ ವಿಸರ್ಜಿಸುವಂತೆ ರಾಷ್ಟ್ರಪತಿಗೆ ಮನವಿ: ಕೆಪಿಸಿಸಿ ವತಿಯಿಂದ ಸಿಇಸಿ ಜ್ಞಾನೇಶ್‌ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ




### ಗ್ರಾಮಮಟ್ಟಕ್ಕೆ ಎಸ್‌ಐಆರ್ ವಿರೋಧಿ ಹೋರಾಟ

ಮುಂಬರುವ ನವೆಂಬರ್, ಡಿಸೆಂಬರ್ ವೇಳೆಗೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸುತ್ತೇವೆ. ಇದಕ್ಕೆ ಬ್ಯಾಲೆಟ್ ಪೇಪರ್ ಬಳಸುವ ತೀರ್ಮಾನ ಮಾಡಿದ್ದೇವೆ. ಬಲಿಷ್ಠ ಚುನಾವಣಾ ವ್ಯವಸ್ಥೆಗೆ ನಾವು ಹೋರಾಟ ಮಾಡುತ್ತಿದ್ದೇವೆ. ಪ್ರತಿ ಹಳ್ಳಿಗೂ ಎಸ್ ಐಆರ್ ವಿರೋಧಿ ಹೋರಾಟ ತಲುಪಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. ಕಾಂಗ್ರೆಸ್ ಪಕ್ಷ ಸಂವಿಧಾನದ ಮೂಲಕ ದೇಶದ ಪ್ರಜೆಗಳಿಗೆ ಅತಿದೊಡ್ಡ ಅವಕಾಶ ನೀಡಿದೆ. ರಾಷ್ಟ್ರಧ್ವಜ, ರಾಷ್ಟ್ರಗೀತೆ ಸೇರಿದಂತೆ ಅನೇಕ ಕೊಡುಗೆಗಳನ್ನು ನಾವು ಈ ದೇಶಕ್ಕೆ ನೀಡಿದ್ದೇವೆ. ಇಡೀ ಪ್ರಪಂಚ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ನೋಡಿ ಅನುಕರಿಸಿದೆ. ಆದರೆ ಬಿಜೆಪಿ ಆಡಳಿತಕ್ಕೆ ಬಂದ ದಿನದಿಂದ ನಮ್ಮ ಇಡೀ ಮಾದರಿ ವ್ಯವಸ್ಥೆ ಮೇಲೆ ಅನೇಕ ರಾಷ್ಟ್ರಗಳು ನಂಬಿಕೆ ಕಳೆದುಕೊಳ್ಳುವ ಸ್ಥಿತಿಗೆ ನಾವು ಬಂದಿದ್ದೇವೆ ಎಂದರು. ಮತಗಳ್ಳತನದ ವಿರುದ್ಧ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ಇದೇ ನೆಲದಿಂದ ಹೋರಾಟ ಪ್ರಾರಂಭ ಮಾಡಿದ್ದರು. ಪ್ರತಿಯೊಬ್ಬ ಬಿಎಲ್‌ಎ-2 ಸೇರಿದಂತೆ ಪಕ್ಷದ ನಾಯಕರು ಹೋರಾಟ ರೂಪಿಸಬೇಕು ಎಂದು ಹೇಳಿದರು.

## 13 ಕೋಟಿ ಮತದಾರರ ಕೈಬಿಟ್ಟು ಮಹಾದ್ರೋಹ: ಬಿ.ಕೆ. ಹರಿಪ್ರಸಾದ್

**ಬೆಂಗಳೂರು, ಸೆ.26:** ಈ ದೇಶದಲ್ಲಿ ಹುಟ್ಟಿರುವ ಯಾವುದೇ ನಾಗರಿಕನ ಮತದಾನದ ಹಕ್ಕನ್ನು ಕಸಿಯಲು ಯಾರಿಗೂ ಅಧಿಕಾರವಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಗುಡುಗಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಕೆಪಿಸಿಸಿ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, ದೇಶಾದ್ಯಂತ ಬರೋಬ್ಬರಿ 13 ಕೋಟಿ ಅರ್ಹ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. 2024ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ 6 ರಾಜ್ಯಗಳ ಚುನಾವಣೆಯಲ್ಲಿ ಅದು ಗೆದ್ದಿರುವುದರ ಹಿಂದೆ ದೊಡ್ಡ ಹುನ್ನಾರವಿದೆ. ಬಿಹಾರದಲ್ಲಿ 64 ಲಕ್ಷ, ಪಶ್ಚಿಮ ಬಂಗಾಳದಲ್ಲಿ 91 ಲಕ್ಷ ಮತಗಳನ್ನು ಕೈಬಿಟ್ಟಿದ್ದು, ಬಂಗಾಳದಲ್ಲೇ 38 ಲಕ್ಷ ಜನರಿಗೆ ನೋಟಿಸ್ ನೀಡಿ ಹಕ್ಕು ತಡೆಹಿಡಿಯಲಾಗಿದೆ. ಹರಿಯಾಣ, ಮಹಾರಾಷ್ಟ್ರದಲ್ಲೂ ಇದೇ ಕೃತ್ಯ ನಡೆದಿದೆ. ನಮ್ಮ ರಾಜ್ಯದಲ್ಲೇ 1.07 ಕೋಟಿ ಮತದಾರರನ್ನು ಕೈಬಿಡಲಾಗಿದ್ದು, ಇದರಲ್ಲಿ 70 ಲಕ್ಷ ಜನರನ್ನು ನಕಲಿ ಮತದಾರರು ಹಾಗೂ 38 ಲಕ್ಷ ಜನರನ್ನು ಇತರೆ ಎಂದು ವರ್ಗೀಕರಿಸಿ ಅನ್ಯಾಯ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಮೋದಿ-ಶಾ ಗೌಪ್ಯ ಆಯುಕ್ತರು!

ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ಟೀಕಿಸಿದ ಬಿ.ಕೆ. ಹರಿಪ್ರಸಾದ್, ವಾಸ್ತವದಲ್ಲಿ ಆಯೋಗದಲ್ಲಿ ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರೇ ಗೌಪ್ಯ ಆಯುಕ್ತರಂತೆ ಕಾರ್ಯನಿರ್ವಹಿಸುತ್ತಿದ್ದು, ಇವರ ಮಾತನ್ನು ಕೇಳಿಕೊಂಡೇ 13 ಕೋಟಿ ಜನರ ಹಕ್ಕು ಕಸಿಯಲಾಗಿದೆ. 75 ವರ್ಷಗಳ ಕಾಲ ನಿಷ್ಪಕ್ಷಪಾತವಾಗಿದ್ದ ಆಯೋಗವು 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಅಕ್ರಮಗಳ ಕೂಪವಾಗಿದೆ ಎಂದರು. 2023ರಲ್ಲಿ ಕಾನೂನು ತಿದ್ದುಪಡಿ ತಂದು ಆಯುಕ್ತರ ಆಯ್ಕೆ ಸಮಿತಿಯಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ಕೈಬಿಟ್ಟು, ಕೇಂದ್ರ ಸಚಿವರನ್ನು ಸೇರಿಸಲಾಗಿದೆ. ಹೀಗಾಗಿ ನ್ಯಾಯ ಸಿಗುವ ಭರವಸೆಯಿಲ್ಲ. ಆಯೋಗದ ಇಂತಹ ಕುತಂತ್ರಗಳಿಗೆ ನ್ಯಾಯಾಂಗವೇ ಕಡಿವಾಣ ಹಾಕಬೇಕು, ಇಲ್ಲವಾದಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನವೇ ಬುಡಮೇಲಾಗಲಿದೆ. ನಮ್ಮ ಪೂರ್ವಜರು ತಂದುಕೊಟ್ಟ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಕಾರ್ಯಕರ್ತರು ಹೋರಾಡಲೇಬೇಕಿದೆ. ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ, ಸೋಮವಾರದಿಂದ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಿಗೂ ಈ ಪ್ರತಿಭಟನೆ ವಿಸ್ತರಣೆಯಾಗಲಿದೆ ಎಂದು ಎಚ್ಚರಿಕೆ ನೀಡಿದರು.

## ಒಳಪುಟಗಳಲ್ಲಿ

ಟಿಕೆಟ್ ಸಿಗದಿದ್ದರೂ ರೈಲು ಅಪಘಾತ ಪರಿಹಾರ ನಿರಾಕರಿಸುವಂತಿಲ್ಲ ಮೃತ ಪ್ರಯಾಣಿಕನ ಕುಟುಂಬಕ್ಕೆ 8 ಲಕ್ಷ ಪರಿಹಾರ ನೀಡಲು ಸುಪ್ರೀಂ ಆದೇಶ - ಪು.4

ವರ್ಷಾಂತ್ಯಕ್ಕೆ ಗ್ರೇಟರ್ ಬೆಂಗಳೂರು ಚುನಾವಣೆ ನಡೆಸಲು ತೆರೆಮರೆ ಸಿದ್ಧತೆ - ಪು.5

ಮತದಾರರ ಹಕ್ಕು ಕಸಿಯುವ ಎಸ್‌ಐಆರ್: ವಿರುದ್ಧ ಮತ್ತೊಂದು ಕ್ರಾಂತಿಗೆ ಪ್ರಕಾಶ್ ರಾಜ್ ಕರೆ-ಪು.6

## ಏಷ್ಯನ್ ಕ್ರೀಡಾಕೂಟ ಕಬಡ್ಡಿಯಲ್ಲಿ ಸ್ವರ್ಣ ಪದಕ ಗೆದ್ದ ಮಹಿಳಾ ತಂಡಕ್ಕೆ ಪ್ರಧಾನಿ ಅಭಿನಂದನೆ



**ನವದೆಹಲಿ, ಸೆ.26:** ರೋಚಕ ಫೈನಲ್ ಪಂದ್ಯದಲ್ಲಿ ಅದ್ಭುತವಾದ ಸ್ವರ್ಣ ಪದಕವನ್ನು ಗೆದ್ದುಕೊಂಡ ಮಹಿಳಾ ಕಬಡ್ಡಿ ತಂಡಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಶನಿವಾರ ಅಭಿನಂದನೆ ಸಲ್ಲಿಸಿದ್ದಾರೆ. ತಂಡವು ಅಸಾಧಾರಣ ಧೈರ್ಯ, ಸಂಯಮ ಮತ್ತು ತಂಡದ ಒಗ್ಗಟ್ಟನ್ನು ಪ್ರದರ್ಶಿಸಿದೆ ಎಂದು ಪ್ರಧಾನಮಂತ್ರಿ ಶ್ಲಾಘಿಸಿದ್ದಾರೆ. ಭಾರತವು ತನ್ನ ಕಬಡ್ಡಿ ಚಾಂಪಿಯನ್‌ಗಳ ಬಗ್ಗೆ ಹೆಮ್ಮೆಪಡುತ್ತದೆ ಎಂದು ತಿಳಿಸಿದ ಮೋದಿ, ಆಟಗಾರ್ತಿಯರು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಯಶಸ್ಸನ್ನು ಕಾಣಲಿ ಎಂದು ಶುಭ ಹಾರೈಸಿದರು. "ಎಂತಹ ರೋಚಕ ಫೈನಲ್ ಪಂದ್ಯ ಮತ್ತು ಮಹಿಳಾ ಕಬಡ್ಡಿ ತಂಡಕ್ಕೆ ಅದ್ಭುತವಾದ ಸ್ವರ್ಣ ಪದಕ; ನಮ್ಮ ಆಟಗಾರ್ತಿಯರಿಗೆ ಅಭಿನಂದನೆಗಳು" ಎಂದು ಪ್ರಧಾನಮಂತ್ರಿ ಹೇಳಿದರು.

## ಭದ್ರತಾ ಮಂಡಳಿ ಕಾಯಂ ಸದಸ್ಯತ್ವ: ವಿಶ್ವಸಂಸ್ಥೆಯಲ್ಲಿ ಭಾರತಕ್ಕೆ ಪೋರ್ಚುಗಲ್, ಮಾರಿಷಸ್ ಬೆಂಬಲ

**ನ್ಯೂಯಾರ್ಕ್, ಸೆ.26:** ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸ್ಥಾನ ನೀಡಬೇಕೆಂಬ ಭಾರತದ ಬೇಡಿಕೆಗೆ ಮತ್ತಷ್ಟು ಬೆಂಬಲ ವ್ಯಕ್ತವಾಗಿದ್ದು, ಪೋರ್ಚುಗಲ್ ಮತ್ತು ಮಾರಿಷಸ್ ದೇಶಗಳು ಭಾರತದ ಬೆನ್ನಿಗೆ ನಿಂತಿವೆ.

ನ್ಯೂಯಾರ್ಕ್‌ನ ವಿಶ್ವಸಂಸ್ಥೆ ಪ್ರಧಾನ ಕಚೇರಿಯಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ 81ನೇ ಸಾಮಾನ್ಯ ಸಭೆಯ ಚರ್ಚೆ ವೇಳೆ ಪೋರ್ಚುಗಲ್ ಮತ್ತು ಮಾರಿಷಸ್ ಭಾರತಕ್ಕೆ ಸ್ಪಷ್ಟ ಬೆಂಬಲ ಘೋಷಿಸಿವೆ. ಸಭೆಯಲ್ಲಿ ಮಾತನಾಡಿದ ಪೋರ್ಚುಗಲ್ ಪ್ರಧಾನಿ ಲೂಯಿಸ್ ಮೊಂಟೆನೆಗ್ರೊ, ಪ್ರಸ್ತುತ ಪ್ರಾದೇಶಿಕ ಮತ್ತು ರಾಜಕೀಯ ವಾಸ್ತವಗಳನ್ನು ಪ್ರತಿಬಿಂಬಿಸುವಂತೆ ಭದ್ರತಾ ಮಂಡಳಿಯನ್ನು ಹೆಚ್ಚು ಪ್ರತಿನಿಧಿತ್ವ ಹೊಂದುವ ರೀತಿಯಲ್ಲಿ ಸುಧಾರಿಸಬೇಕಿದ್ದು, ಭಾರತಕ್ಕೆ ಕಾಯಂ ಸದಸ್ಯತ್ವ ನೀಡಬೇಕು ಎಂದು ಹೇಳಿದ್ದಾರೆ.

ಅಂತೆಯೇ ಮಾರಿಷಸ್ ವಿದೇಶಾಂಗ ಸಚಿವ ಧನಂಜಯ್ ರಾಮ್‌ಫುಲ್ ಕೂಡ ಭಾರತಕ್ಕೆ ನೇರ ಬೆಂಬಲ ವ್ಯಕ್ತಪಡಿಸಿದ್ದು, ಜಾಗತಿಕ ವ್ಯವಹಾರಗಳಲ್ಲಿ ಭಾರತದ ರಚನಾತ್ಮಕ ಪಾತ್ರವನ್ನು ಗುರುತಿಸಿ, ಭದ್ರತಾ ಮಂಡಳಿಯಲ್ಲಿ ಕಾಯಂ ಸ್ಥಾನಕ್ಕಾಗಿ ಭಾರತದ ಉಮೇದುವಾರಿಕೆಗೆ ಮಾರಿಷಸ್ ಬೆಂಬಲವನ್ನು ಪುನರುಚ್ಚರಿಸುತ್ತದೆ ಎಂದು ಹೇಳಿದ್ದಾರೆ. ಭಾರತ, ಬ್ರೆಜಿಲ್, ಜರ್ಮನಿ ಮತ್ತು ಜಪಾನ್ ಒಳಗೊಂಡ ಜಿ4 ಒಕ್ಕೂಟದ ಮೂಲಕ ಮಾರ್ಷಲ್ ದ್ವೀಪಗಳ ಅಧ್ಯಕ್ಷೆ ಹಿಲ್ಡಾ ಹೈನ್ ಕೂಡ ಪರೋಕ್ಷವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಚೀನಾ, ಫ್ರಾನ್ಸ್, ರಷ್ಯಾ, ಬ್ರಿಟನ್ ಮತ್ತು ಅಮೆರಿಕ ಐದು ಕಾಯಂ ಸದಸ್ಯ ರಾಷ್ಟ್ರಗಳಾಗಿವೆ. ಈ ಐದು ರಾಷ್ಟ್ರಗಳಿಗೆ ವೀಟೊ ಅಧಿಕಾರವಿದೆ. ಇನ್ನುಳಿದ 10 ರಾಷ್ಟ್ರಗಳು ಎರಡು ವರ್ಷಗಳ ಅವಧಿಗೆ ಆಯ್ಕೆಯಾಗುವ ಸದಸ್ಯ ರಾಷ್ಟ್ರಗಳಾಗಿವೆ.

## ಹಾರ್ಮುಜ್ ಜಲಸಂಧಿ ತೆರೆಯಲು ಇರಾನ್‌ನ ಕದನ ವಿರಾಮ ಪ್ರಸ್ತಾಪ ತಿರಸ್ಕರಿಸಿದ ಟ್ರಂಪ್

**ವಾಷಿಂಗ್ಟನ್, ಸೆ.26:** ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಇರಾನ್ ಮುಂದಿಟ್ಟಿರುವ 7 ದಿನಗಳ ಯೋಜನೆಯನ್ನು ಪ್ರಸ್ತಾಪ ಮುಂದಿಟ್ಟ ಕೆಲವೇ ಗಂಟೆಗಳಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ್ದಾರೆ.

ವಿಶ್ವದ ತೈಲ ಪೂರೈಕೆಗೆ ಪ್ರಮುಖವಾಗಿರುವ ಈ ಜಲಮಾರ್ಗವು ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದ ಕೇಂದ್ರಬಿಂದುವಾಗಿದೆ. ಸುಮಾರು ಏಳು ತಿಂಗಳಿನಿಂದ ನಡೆಯುತ್ತಿರುವ ಈ ಸಂಘರ್ಷ ಸದ್ಯ ಸ್ಥಗಿತ ಸ್ಥಿತಿಯಲ್ಲಿದೆ. ಆದರೆ, ಈ ವಾರ ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವ ನಾಯಕರ ವಿಶ್ವಸಂಸ್ಥೆ ಸಭೆಯ ವೇಳೆ ನಡೆದ ಹೊಸ ಮಧ್ಯಸ್ಥಿಕೆ ಪ್ರಯತ್ನಗಳು ಒಪ್ಪಂದವೊಂದರತ್ತ ಮುನ್ನಡೆಯುವ ಬಗ್ಗೆ ಆಶಾವಾದ ಮೂಡಿಸಿವೆ.

ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಡೊನಾಲ್ಡ್ ಟ್ರಂಪ್ ಅವರ ರಾಯಭಾರಿ ಸ್ಟೀವ್ ವಿಟ್ಕಾಫ್ ಅವರೊಂದಿಗೆ ಮಾತುಕತೆ ನಡೆಸಿದ್ದರು. ಇದಕ್ಕೂ ಮುನ್ನ ಅವರು ಯುದ್ಧವನ್ನು ಕೊನೆಗೊಳಿಸಲು ಹಾಗೂ ಪ್ರಮುಖ ಹಡಗು ಸಂಚಾರ ಮಾರ್ಗವನ್ನು ಮತ್ತೆ ತೆರೆಯಲು ಇರಾನ್ ವಿಧಿಸಿರುವ ಷರತ್ತುಗಳನ್ನು ತಿಳಿಸಿದ್ದರು.

ಇರಾನ್, ಕತಾರ್ ಮೂಲಕ ಇರಾನ್ ಅಮೆರಿಕಕ್ಕೆ ಏಳು ದಿನಗಳ ನಿರ್ದಿಷ್ಟ ಯೋಜನೆಯನ್ನು ತಿಳಿಸಿದೆ. ಅಗತ್ಯ ಷರತ್ತುಗಳನ್ನು ಈಡೇರಿಸಿದರೆ, ಜಲಸಂಧಿಯನ್ನು ಮತ್ತೆ ತೆರೆಯಬಹುದು ಮತ್ತು ಏಳು ದಿನಗಳೊಳಗೆ ಸಾಮಾನ್ಯ ಸಮುದ್ರ ಸಂಚಾರವನ್ನು ಪುನಃಸ್ಥಾಪಿಸಬಹುದು ಎಂದು ಅರಾಘ್ಚಿ ಹೇಳಿದ್ದರು. ಮುಂದುವರಿದು ಈಗ ಆಯ್ಕೆ ಅಮೆರಿಕದ ಕೈಯಲ್ಲಿದೆ. ಇರಾನ್ ಬಲವಂತ, ಬೆದರಿಕೆ ಅಥವಾ ಒತ್ತಡವನ್ನು ಒಪ್ಪಿಕೊಳ್ಳುವುದಿಲ್ಲ. ಒತ್ತಡಕ್ಕೆ ಮಣಿದು ತನ್ನ ಸಾರ್ವಭೌಮ ಹಕ್ಕುಗಳನ್ನು ಬಿಟ್ಟುಕೊಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು.

ಆದರೆ, ಅವರ ಹೇಳಿಕೆ ಹೊರಬಂದ ಕೆಲವೇ ಗಂಟೆಗಳಲ್ಲಿ, ಟ್ರಂಪ್ ಈ ಪ್ರಸ್ತಾವವನ್ನು ತಿರಸ್ಕರಿಸಿದ್ದಾರೆ ಎಂದು ಪತ್ರಿಕೆಯೊಂದು ಅಮೆರಿಕದ ಅಧಿಕಾರಿಗಳನ್ನು ಉಲ್ಲೇಖಿಸಿ ವರದಿ ಮಾಡಿದೆ. ಇರಾನ್ ತನ್ನ ಬೇಡಿಕೆಗಳನ್ನು



ಈಡೇರಿಸಲಿದೆ ಎಂಬ ಬಗ್ಗೆ 80 ವರ್ಷದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅನುಮಾನವಿದೆ. ಅಲ್ಲದೆ, ಮತ್ತೆ ಬಾಂಬ್ ದಾಳಿ ನಡೆಸುವ ಸಾಧ್ಯತೆಯಿದೆ ಎಂದು ಅವರು ಭಾವಿಸಿದ್ದಾರೆ ಎಂದು ವರದಿ ತಿಳಿಸಿದೆ.

ಕನಿಷ್ಠ 120 ಕೋಟಿ ಡಾಲರ್ ಮೌಲ್ಯದ ಇರಾನ್‌ನ ಸ್ಥಗಿತಗೊಂಡಿರುವ ಆಸ್ತಿಗಳನ್ನು ಬಿಡುಗಡೆ ಮಾಡುವುದು, ಇರಾನ್‌ನ ತೈಲದ ಮೇಲಿನ ನಿರ್ಬಂಧಗಳನ್ನು ತೆರವುಗೊಳಿಸುವುದು ಹಾಗೂ ಇರಾನ್ ವಿರುದ್ಧದ ಅಮೆರಿಕದ ನೌಕಾ ದಿಗ್ಬಂಧನವನ್ನು ಅಂತ್ಯಗೊಳಿಸುವುದೂ ಈ ಯೋಜನೆಯಲ್ಲಿದೆ ಎಂದು ವರದಿಯಾಗಿದೆ. ಕದನ ವಿರಾಮದ ಏಳನೇ ದಿನ ಇರಾನ್ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲಿದೆ.

ಅಮೆರಿಕದ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್, ಕದನ ವಿರಾಮಕ್ಕೆ ಅವರು ಒಪ್ಪಿಕೊಂಡ ದಿನದಿಂದಲೇ ಪ್ರಕ್ರಿಯೆ ಆರಂಭವಾಗಲಿದೆ ಎಂದು ಹೇಳಿದ್ದರು. ಪಾಕಿಸ್ತಾನದಲ್ಲಿ ಸಹಿ ಮಾಡಲಾದ ಒಡಂಬಡಿಕೆಯ ಆಧಾರದ ಮೇಲೆ ನಾವು ಈ ಹಿಂದೆ ಒಪ್ಪಂದ ಮಾಡಿಕೊಂಡಿದ್ದೆವು. ಅದೇ ರೀತಿಯಲ್ಲಿ ಮುಂದುವರಿಯಲು ಅಮೆರಿಕ ಒಪ್ಪಿಕೊಂಡರೆ, ಎಲ್ಲವೂ ಹಿಂದಿನಂತೆಯೇ ಆಗಲಿದೆ ಎಂದು ಹೇಳಿದರು.

ಯೆಮನ್‌ನಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಅಂತ್ಯಗೊಳಿಸುವುದೂ ಇರಾನ್‌ನ ಬೇಡಿಕೆಗಳಲ್ಲಿ ಒಂದಾಗಿದೆ ಎಂದು ಇರಾನ್ ರೆವಲ್ಯೂಷನರಿ ಗಾರ್ಡ್ಸ್‌ನ ವಕ್ತಾರ ಹೊಸೇನ್ ಮೊಹೆಬಿ ತಿಳಿಸಿದ್ದಾರೆ.

## ಭ್ರಷ್ಟಾಚಾರ ಪ್ರಕರಣ: ಕೆ.ಜೆ. ಜಾರ್ಜ್ ವಿರುದ್ಧದ ಅರ್ಜಿ ವಜಾಗೊಳಿಸಿದ ಸುಪ್ರೀಂ



**ನವದೆಹಲಿ, ಸೆ.26:** ಕರ್ನಾಟಕದ ಇಂಧನ ಸಚಿವ ಕೆ.ಜೆ. ಜಾರ್ಜ್ ಹಾಗೂ ಬೆಸ್ಕಾಂ ಅಧಿಕಾರಿಗಳ ವಿರುದ್ಧ ಸ್ಮಾರ್ಟ್ ವಿದ್ಯುತ್ ಮೀಟರ್‌ಗಳ ಟೆಂಡರ್ ಮತ್ತು ಅಳವಡಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ಹೈಕೋರ್ಟ್ ಪ್ರಕರಣವನ್ನು ರದ್ದುಗೊಳಿಸಿದ್ದನ್ನು ಪ್ರಶ್ನಿಸಿ ಬಿಜೆಪಿ ಶಾಸಕರು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂಕೋರ್ಟ್ ಶುಕ್ರವಾರ ವಜಾಗೊಳಿಸಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಕೆ. ವಿನೋದ್ ಚಂದ್ರನ್ ಅವರ ಪೀಠ ಅರ್ಜಿಯ ವಿಚಾರಣೆ ನಡೆಸಿತು. ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಿಸಲು ಸೂಕ್ತ ಕಾರಣ ಕಂಡುಬಂದಿಲ್ಲ ಎಂದು ಪೀಠ ಹೇಳಿತು.

ಸ್ಮಾರ್ಟ್ ಮೀಟರ್ ಟೆಂಡರ್‌ಗೆ ಸಂಬಂಧಿಸಿದಂತೆ ಕೆ.ಜೆ. ಜಾರ್ಜ್ ಹಾಗೂ ಬೆಸ್ಕಾಂ ಅಧಿಕಾರಿಗಳ ವಿರುದ್ಧ ಬಿಜೆಪಿ ಶಾಸಕರಾದ ಸಿ.ಎನ್. ಅಶ್ವತ್ಥನಾರಾಯಣ, ಎಸ್.ಆರ್. ವಿಶ್ವನಾಥ್ ಮತ್ತು ಧೀರಜ್ ಮುನಿರಾಜ್ ದೂರು ಸಲ್ಲಿಸಿದ್ದರು. ಮೊದಲು ಲೋಕಾಯುಕ್ತ ಪೊಲೀಸರನ್ನು ಸಂಪರ್ಕಿಸಿದ್ದ ಶಾಸಕರು ಬಳಿಕ ಭ್ರಷ್ಟಾಚಾರ ತಡೆ ಕಾಯ್ದೆಯ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು.

ಪ್ರಕರಣ ರದ್ದುಪಡಿಸುವಂತೆ ಕರ್ನಾಟಕ ಹೈಕೋರ್ಟ್‌ಗೆ ಕೆ.ಜೆ. ಜಾರ್ಜ್ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್, ಭ್ರಷ್ಟಾಚಾರದ ಆರೋಪವನ್ನು ಸಮರ್ಥಿಸುವ ಸಾಕಷ್ಟು ದಾಖಲೆ ಅಥವಾ ವಸ್ತುಗಳು ಕಂಡುಬಂದಿಲ್ಲ ಹಾಗೂ ಸಚಿವರಿಗೆ ಯಾವುದೇ ಆರ್ಥಿಕ ಲಾಭ ದೊರೆತಿರುವ ಆರೋಪಕ್ಕೂ ಆಧಾರವಿಲ್ಲ ಎಂದು ಪ್ರಕರಣವನ್ನು ರದ್ದುಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಬಿಜೆಪಿ ಶಾಸಕರು ಸುಪ್ರೀಂಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು. ಆದರೆ, ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ಯಾವುದೇ ಸೂಕ್ತ ಕಾರಣವಿಲ್ಲ ಎಂದು ಹೇಳಿದ ಸುಪ್ರೀಂಕೋರ್ಟ್ ಅರ್ಜಿಯನ್ನು ವಜಾಗೊಳಿಸಿದೆ.

## ಕೊನೆಯ ವಿಶ್ವಕಪ್, ಏಕದಿನ ಕ್ರಿಕೆಟ್‌ಗೂ ಗುಡ್‌ಬೈ: ವಿರಾಟ್‌ಕೊಹ್ಲಿ ಸುಳಿವು




**ತಿರುವನಂತಪುರಂ, ಸೆ.26:** ಈಗಾಗಲೇ ಟೆಸ್ಟ್ ಹಾಗೂ ಟಿ20 ಮಾದರಿಯಿಂದ ನಿವೃತ್ತಿಯಾಗಿರುವ ಭಾರತ ತಂಡದ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅವರು ಇದೀಗ ಏಕದಿನ ಕ್ರಿಕೆಟ್‌ನಿಂದಲೂ ನಿವೃತ್ತಿ ಪಡೆಯುವುದಾಗಿ ಘೋಷಿಸಿದ್ದಾರೆ. ಮುಂದಿನ ವರ್ಷ ದಕ್ಷಿಣ ಆಫ್ರಿಕಾ, ನಮೀಬಿಯಾ ಮತ್ತು ಜಿಂಬಾಬ್ವೆಯಲ್ಲಿ ನಡೆಯಲಿರುವ ಐಸಿಸಿ ಪುರುಷರ ಕ್ರಿಕೆಟ್ ವಿಶ್ವಕಪ್ ನನಗೆ ಹಾಗೂ ಭಾರತಕ್ಕಾಗಿ ನಾನು ಆಡಲಿರುವ ಕೊನೆಯ ವಿಶ್ವಕಪ್ ಆಗಲಿದೆ. ಅದೇ ನನಗೆ ಪ್ರೇರಣೆ ಎಂದು ಹೇಳಿದ್ದಾರೆ. ಸಹಜವಾಗಿಯೇ, ವಿಶ್ವಕಪ್ ಗೆಲ್ಲುವುದೇ ನನ್ನ ಗುರಿ. ಅದಕ್ಕಾಗಿ ಏನು ಮಾಡಬೇಕಾದರೂ ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ. ಸುದ್ದಿವಾಹಿನಿಯೊಂದಿಗಿನ ಸಂದರ್ಶನದಲ್ಲಿ ತಮ್ಮ ಮನದಾಳದ ಮಾತುಗಳನ್ನು ತೆರೆದಿಟ್ಟಿದ್ದಾರೆ. ಈ ಮಾದರಿಯಲ್ಲಿ 15,000 ರನ್‌ಗಳ ಮೈಲಿಗಲ್ಲನ್ನು ತಲುಪಲು ಸನಿಹದಲ್ಲಿರುವ ಕೊಹ್ಲಿ, ಭಾರತಕ್ಕಾಗಿ 4 ಏಕದಿನ ವಿಶ್ವಕಪ್‌ಗಳಲ್ಲಿ ಆಡಿದ್ದು, 2011ರಲ್ಲಿ ವಿಜೇತ ತಂಡದ ಭಾಗವಾಗಿದ್ದರು.

**ದಾಖಲೆಗಳು:** ವಿಶ್ವಕಪ್ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿರುವ ಕೊಹ್ಲಿ, ವಿಶ್ವಕಪ್‌ನಲ್ಲಿ 37 ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಇದರಲ್ಲಿ 59.83ರ ಸರಾಸರಿಯಲ್ಲಿ 1,795 ರನ್ ಗಳಿಸಿದ್ದು, 5 ಶತಕಗಳು ಮತ್ತು 12 ಅರ್ಧಶತಕಗಳನ್ನು ಒಳಗೊಂಡಿವೆ. ಗರಿಷ್ಠ ವೈಯಕ್ತಿಕ ಮೊತ್ತ 117 ರನ್ ಆಗಿದೆ. ತಮ್ಮ ಒಟ್ಟಾರೆ ಏಕದಿನ ವೃತ್ತಿಜೀವನದಲ್ಲಿ, ಅವರು 302 ಇನ್ನಿಂಗ್ಸ್‌ಗಳಲ್ಲಿ 58.59ರ ಸರಾಸರಿಯಲ್ಲಿ 14,941 ರನ್ ಗಳಿಸಿದ್ದು, ಇದರಲ್ಲಿ 54 ಶತಕಗಳು ಮತ್ತು 79 ಅರ್ಧಶತಕಗಳು ಸೇರಿವೆ. ಅವರ ಗರಿಷ್ಠ ವೈಯಕ್ತಿಕ ಮೊತ್ತ 183 ರನ್ ಆಗಿದ್ದು, ಸ್ಟ್ರೈಕ್ ರೇಟ್ 93.95 ಆಗಿದೆ.

# ಬಂಡಾಯ, ಭಿನ್ನಾಭಿಪ್ರಾಯವಿಲ್ಲ, ಒಮ್ಮತದ ಅನುಮೋದನೆ: ಚುನಾವಣಾ ಆಯೋಗ ಸ್ಪಷ್ಟನೆ


**ನವದೆಹಲಿ, ಸೆ.26:** ಆಯೋಗದಲ್ಲಿ ಯಾವುದೇ ಬಂಡಾಯ ಅಥವಾ ಭಿನ್ನಾಭಿಪ್ರಾಯಗಳಿಲ್ಲ. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಗೆ ಸಂಬಂಧಿಸಿದ ಪ್ರಮುಖ ನಿರ್ಧಾರಗಳನ್ನು ಮೂವರು ಚುನಾವಣಾ ಆಯುಕ್ತರೂ ಸರ್ವಾನುಮತದಿಂದ ಅನುಮೋದಿಸಿದ್ದಾರೆ ಎಂದು ಚುನಾವಣಾ ಆಯೋಗ ಶನಿವಾರ ಸ್ಪಷ್ಟಪಡಿಸಿದೆ.

ಎಸ್‌ಐಆರ್ ವಿಚಾರದಲ್ಲಿ ಆಯೋಗದೊಳಗೆ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಈ ಸ್ಪಷ್ಟನೆ ನೀಡಲಾಗಿದ್ದು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹಾಗೂ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಶನಿವಾರ ದೆಹಲಿಯ ನಿರ್ವಾಚನ್ ಸದನ್‌ನಲ್ಲಿ ನಡೆದ ಪೂರ್ಣ ಆಯೋಗದ ಸಭೆಯಲ್ಲಿ ಭಾಗವಹಿಸಿದ್ದರು.

ಪ್ರತಿಕೆಯೊಂದರಲ್ಲಿ ಸೆಪ್ಟೆಂಬರ್ 23ರಂದು ಪ್ರಕಟವಾದ ವರದಿಯಲ್ಲಿ, ಎಸ್‌ಐಆರ್‌ಗೆ ಸಂಬಂಧಿಸಿದ ಹಲವು ನಿರ್ಧಾರ ಮತ್ತು ಆದೇಶಗಳ ಬಗ್ಗೆ ಸಂಧು ಹಾಗೂ ಜೋಶಿ ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ವರದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಆಯೋಗದ ಕಾರ್ಯವೈಖರಿ ಕುರಿತು ರಾಜಕೀಯ ಚರ್ಚೆ ನಡೆದಿತ್ತು. ಆದರೆ, ಎಸ್‌ಐಆರ್ ಸಂಬಂಧಿಸಿದ ಪ್ರಮುಖ ನಿರ್ಧಾರಗಳು ಹಾಗೂ ಆದೇಶಗಳು ಮೂವರು ಆಯುಕ್ತರ ಸರ್ವಾನುಮತದ ಅನುಮೋದನೆಯೊಂದಿಗೆ ಕೈಗೊಳ್ಳಲಾಗಿದೆ ಎಂದು ಆಯೋಗ ಸ್ಪಷ್ಟಪಡಿಸಿದೆ.

### ಎಸ್‌ಐಆರ್ ವಿಚಾರದಲ್ಲಿ ಆಂತರಿಕ ಭಿನ್ನಾಭಿಪ್ರಾಯದ ವರದಿ ತಳ್ಳಿಹಾಕಿದ ಮೂವರು ಆಯುಕ್ತರು

2025ರ ಜೂನ್ 24ರಂದು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಂತೆ ಹೊರಡಿಸಲಾದ ಎಸ್‌ಐಆರ್ ಆದೇಶವೂ ಸರ್ವಾನುಮತದಿಂದ ಅನುಮೋದನೆಯಾಗಿತ್ತು ಎಂದು ಹೇಳಿದೆ. ಈ ಆದೇಶವನ್ನು 2026ರ ಮೇ 27ರಂದು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ




ಎಂದು ಆಯೋಗ ತಿಳಿಸಿದೆ. 2025ರ ಅಕ್ಟೋಬರ್ 27ರಂದು 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಾಗೂ 2026ರ ಮೇ 14ರಂದು 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹೊರಡಿಸಲಾದ ಎಸ್‌ಐಆರ್ ವೇಳಾಪಟ್ಟಿಗಳಿಗೂ ಆಯೋಗದ ಸರ್ವಾನುಮತದ ಅನುಮೋದನೆ ಇತ್ತು ಎಂದು ತಿಳಿಸಲಾಗಿದೆ.

ಆಯೋಗದ ಎಲ್ಲ ಸಭೆಗಳ ಕಾರ್ಯಸೂಚಿಯನ್ನು ಮುಂಚಿತವಾಗಿ ಹಂಚಿಕೊಳ್ಳಲು ಹಾಗೂ ಸಭೆಗಳ ನಡಾವಳಿಯನ್ನು ದಾಖಲಿಸಲು ನಿರ್ಧರಿಸಲಾಗಿದೆ. ಅಧಿಕಾರಿಗಳ ವಾರ್ಷಿಕ ಕಾರ್ಯಕ್ಷಮತೆ ಮೌಲ್ಯಮಾಪನ ವರದಿಗಳನ್ನು ಪ್ರತಿವರ್ಷ ಡಿಸೆಂಬರ್ 31ರೊಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಅಧಿಕಾರಿಗಳ ವಿದೇಶ ಪ್ರವಾಸಕ್ಕೂ ಆಯೋಗದ ಅನುಮೋದನೆ ಕಡ್ಡಾಯಗೊಳಿಸಲಾಗಿದೆ.

### ದೆಹಲಿ, ಮಹಾರಾಷ್ಟ್ರದಲ್ಲಿ ಗಡುವು ವಿಸ್ತರಣೆ

ದೆಹಲಿ ರಾಜ್ಯದಲ್ಲಿ ಹಕ್ಕು-ಆಕ್ಷೇಪಣೆ ಸಲ್ಲಿಸಲು ಇರುವ ಗಡುವನ್ನು ಅಕ್ಟೋಬರ್ 30, 2026ರವರೆಗೆ ವಿಸ್ತರಿಸಲಾಗಿದೆ. ನೋಟಿಸ್, ಹಕ್ಕು-ಆಕ್ಷೇಪಣೆಗಳ ವಿಲೇವಾರಿ ಅವಧಿಯನ್ನು ನವೆಂಬರ್ 30ರವರೆಗೆ ವಿಸ್ತರಿಸಲಾಗಿದೆ. ಮಹಾರಾಷ್ಟ್ರದಲ್ಲಿ ಹಕ್ಕು-ಆಕ್ಷೇಪಣೆ ಸಲ್ಲಿಸುವ ಗಡುವನ್ನು ಅಕ್ಟೋಬರ್ 12ರವರೆಗೆ ಹಾಗೂ ಅವುಗಳ ವಿಲೇವಾರಿ ಅವಧಿಯನ್ನು ನವೆಂಬರ್ 10ರವರೆಗೆ ವಿಸ್ತರಿಸಲಾಗಿದೆ. ಎಸ್‌ಐಆರ್ ಸಂದರ್ಭದಲ್ಲಿ ಹೆಸರು ಕೈಬಿಟ್ಟಿರುವವರು, ಯುವ ಮತದಾರರು ಹಾಗೂ ಮೊದಲ ಬಾರಿಗೆ ಮತದಾರರಾಗುತ್ತಿರುವವರು ನಿರಂತರ ಪರಿಷ್ಕರಣೆ ಪ್ರಕ್ರಿಯೆಯ ಮೂಲಕ ಸಂಬಂಧಪಟ್ಟ ಇಆರ್‌ಓಗೆ ಅರ್ಜಿ ಸಲ್ಲಿಸಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಿಸಿಕೊಳ್ಳಬಹುದು ಎಂದು ಆಯೋಗ ತಿಳಿಸಿದೆ.

### ನೋಟಿಸ್ ಪಡೆದವರಿಗೆ ವಿನಾಯಿತಿ, ಮನೆಗೇ ಬರಲಿದ್ದಾರೆ ಬಿಎಲ್‌ಓಗಳು

ಎಸ್‌ಐಆರ್ ವೇಳೆ ಅನ್‌ಮ್ಯಾಪ್ಡ್ ಅಥವಾ ತಾರ್ಕಿಕ ವ್ಯತ್ಯಾಸ ಕಂಡುಬಂದ ಹಿನ್ನೆಲೆಯಲ್ಲಿ ನೋಟಿಸ್ ಪಡೆದಿರುವ ಮತದಾರರಿಗೆ ಹೊಸ ಸೌಲಭ್ಯ ಕಲ್ಪಿಸಲಾಗಿದೆ. ಇನ್ನು ಮುಂದೆ ಇಂತಹ ಮತದಾರರು ಪ್ರತಿಯೊಂದು ಪ್ರಕರಣದಲ್ಲೂ ಚುನಾವಣಾ ನೋಂದಣಿ ಅಧಿಕಾರಿ (ಇಆರ್‌ಓ) ಅಥವಾ ಸಹಾಯಕ ಚುನಾವಣಾ ನೋಂದಣಿ ಅಧಿಕಾರಿ (ಎಇಆರ್‌ಓ) ಮುಂದೆ ಖುದ್ದಾಗಿ ಹಾಜರಾಗಬೇಕಾಗಿಲ್ಲ. ಬೂತ್‌ಮಟ್ಟದ ಅಧಿಕಾರಿಗಳು (ಬಿಎಲ್‌ಓ) ಅಂತಹವರ ಮನೆಗಳಿಗೆ ತೆರಳಿ ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ಇಸಿಐಎನ್‌ಇಟಿ ನಲ್ಲಿ ಅಪ್‌ಲೋಡ್ ಮಾಡಲಿದ್ದಾರೆ. ಬಳಿಕ ಇಆರ್‌ಓ ದಾಖಲೆಗಳನ್ನು ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಿದ್ದಾರೆ.

# ಚುನಾವಣಾ ಆಯೋಗದ ಸ್ವಾಯತ್ತತೆ ರಕ್ಷಣೆಗಾಗಿ ಸಿಇಸಿ ವಜಾಗೊಳಿಸಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಮಾಜಿ ಸಿಎಂ ಸಿದ್ದರಾಮಯ್ಯ ಆಗ್ರಹ

**ಬೆಂಗಳೂರು, ಸೆ.26:** ಚುನಾವಣಾ ಆಯೋಗದ ಇತ್ತೀಚಿನ ಬೆಳವಣಿಗೆಗಳು ಹಾಗೂ ಅದರ ಕಾರ್ಯವೈಖರಿ ಕುರಿತು ದೇಶದ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವವರಲ್ಲಿ ಆತಂಕ ಮೂಡಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಕೂಡಲೇ ವಜಾಗೊಳಿಸುವುದರ ಜೊತೆಗೆ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ವಿಚಾರಣೆ ನಡೆಸಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.



ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಫ್ರೀಡಂ ಪಾರ್ಕ್‌ನಲ್ಲಿ ಕೆಪಿಸಿಸಿ ಆಯೋಜಿಸಿರುವ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಈ ವೇಳೆ ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಖಂಡನೆ ವ್ಯಕ್ತಪಡಿಸಿದ ಅವರು, ಮುಖ್ಯ ಚುನಾವಣಾ ಆಯುಕ್ತರನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿ ದೇಶಾದ್ಯಂತ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಯ ಭಾಗವಾಗಿ ಕರ್ನಾಟಕದಲ್ಲಿಯೂ ಇಂದು ಪ್ರತಿಭಟನೆ ನಡೆಯುತ್ತಿದೆ. ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಂಘ-ಸಂಸ್ಥೆಗಳು ಪ್ರತಿಭಟನೆಯಲ್ಲಿ ಭಾಗವಹಿಸುತ್ತಿವೆ. ರಾಹುಲ್ ಗಾಂಧಿ ಅವರ ಹೋರಾಟಕ್ಕೆ ಬೆಂಬಲವಾಗಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಚುನಾವಣಾ ಆಯೋಗ ಒಂದು ಸಂವಿಧಾನಾತ್ಮಕ ಸಂಸ್ಥೆ. ಸಂವಿಧಾನದ ಆಶಯದಂತೆ ಅದು ಚುನಾವಣೆಗಳನ್ನು ಸ್ವತಂತ್ರವಾಗಿ, ನಿಷ್ಪಕ್ಷಪಾತವಾಗಿ ಮತ್ತು ಪಾರದರ್ಶಕವಾಗಿ ನಡೆಸಬೇಕಾಗುತ್ತದೆ. ಚುನಾವಣಾ ಆಯೋಗ ಸ್ವತಂತ್ರವಾಗಿ ಕಾರ್ಯನಿರ್ವಹಿಸದಿದ್ದರೆ ಪ್ರಜಾಪ್ರಭುತ್ವವೇ ಉಳಿಯುವುದಿಲ್ಲ. ಇದು ಪ್ರಜಾಪ್ರಭುತ್ವದ ಅಳಿವು-ಉಳಿವಿನ ಪ್ರಶ್ನೆಯಾಗಿದೆ ಎಂದು ಪ್ರತಿಪಾದಿಸಿದರು. ಚುನಾವಣಾ ಆಯೋಗದ ಸದಸ್ಯರು ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂದು ಸಾಬೀತಾದರೆ, ಅವರ ವಿರುದ್ಧ ಸಂವಿಧಾನಬದ್ಧ ಕ್ರಮ ಜರುಗಿಸಬೇಕು. ಸಂವಿಧಾನದ ರಕ್ಷಣೆಯ ಜವಾಬ್ದಾರಿ ಹೊಂದಿರುವ ರಾಷ್ಟ್ರಪತಿ ಈ ವಿಚಾರದಲ್ಲಿ ಮಧ್ಯಪ್ರವೇಶಿಸಿ ಕ್ರಮ ಕೈಗೊಳ್ಳಬೇಕು ಎಂದು ಸಿದ್ದರಾಮಯ್ಯ ಒತ್ತಾಯಿಸಿದರು.

### ಸಿಇಸಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ

ಚುನಾವಣೆಗಳನ್ನು ನಿಷ್ಪಕ್ಷಪಾತವಾಗಿ, ಸ್ವತಂತ್ರವಾಗಿ ಹಾಗೂ ಪಾರದರ್ಶಕವಾಗಿ ನಡೆಸಬೇಕಾದ ಚುನಾವಣಾ ಆಯೋಗ ಕೇಂದ್ರ ಸರ್ಕಾರದ ತಾಳಕ್ಕೆ ತಕ್ಕಂತೆ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದ ಸಿದ್ದರಾಮಯ್ಯ ಅವರು, ಈ ಕುರಿತು ರಾಷ್ಟ್ರಪತಿಗಳು ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಿದರು. ಮುಖ್ಯ ಚುನಾವಣಾ ಆಯುಕ್ತರನ್ನು ವಜಾಗೊಳಿಸುವುದರ ಜೊತೆಗೆ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

### ಮೋದಿಗೆ ಮಾತ್ರ ವಯಸ್ಸಿನ ವಿನಾಯಿತಿ ಏಕೆ?

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಯಸ್ಸಿನ ವಿಚಾರವನ್ನೂ ಪ್ರಸ್ತಾಪಿಸಿದ ಸಿದ್ದರಾಮಯ್ಯ ಅವರು, ನರೇಂದ್ರ ಮೋದಿ ಅವರಿಗೆ 75 ವರ್ಷ ವಯಸ್ಸಾಗಿದೆ. ಇತರರಿಗೆ 75 ವರ್ಷವಾದ ಬಳಿಕ ನಿವೃತ್ತಿಯ ವಿಚಾರವನ್ನು ಮುಂದಿಡಲಾಗುತ್ತದೆ. ಆದರೆ ನರೇಂದ್ರ ಮೋದಿ ಅವರಿಗೆಮಾತ್ರ ಇದರಿಂದ ವಿನಾಯಿತಿ ನೀಡಲಾಗಿದೆ ಎಂದು ಟೀಕಿಸಿದರು. ಮೋದಿ ಅವರು ನಿಷ್ಪಕ್ಷಪಾತವಾಗಿ ಪ್ರಧಾನ ಮಂತ್ರಿಯಾಗಿಲ್ಲ, ಮತಗಳ್ಳತನದ ಮೂಲಕ ಅಧಿಕಾರಕ್ಕೆ ಬಂದಿದ್ದಾರೆ ಎಂದು ಆರೋಪಿಸಿದ ಅವರು, ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದಿರುವ ಪ್ರಧಾನಮಂತ್ರಿಗೆ ಒಂದು ನಿಮಿಷವೂ ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕಿಲ್ಲ ಎಂದು ಹೇಳಿದರು.




ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಶನಿವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕೆಪಿಸಿಸಿಯಿಂದ ಧರಣಿ ನಡೆಸಿದರು.

# ವರ್ಷಾಂತ್ಯಕ್ಕೆ ಗ್ರೇಟರ್ ಬೆಂಗಳೂರು ಚುನಾವಣೆ ನಡೆಸಲು ತೆರೆಮರೆ ಸಿದ್ಧತೆ

**ಬೆಂಗಳೂರು, ಸೆ.26:** ಮತ್ತೆ ಜಿಬಿಎ ಚುನಾವಣೆ ವಿಚಾರ ಮುನ್ನೆಲೆಗೆ ಬಂದಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ನಗರ ಪಾಲಿಕೆಗಳ ಚುನಾವಣೆಗೆ ತೆರೆಮರೆಯಲ್ಲಿ ಸಿದ್ಧತೆ ಚುರುಕುಗೊಂಡಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಡಿಸೆಂಬರ್‌ನಲ್ಲೇ ಚುನಾವಣೆ ನಡೆಸಬೇಕಿರುವ ಹಿನ್ನೆಲೆಯಲ್ಲಿ ಆಡಳಿತ ಯಂತ್ರವನ್ನು ಚುನಾವಣಾ ಕಾರ್ಯಕ್ಕೆ ಸಜ್ಜುಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ.

ಐದು ನಗರ ಪಾಲಿಕೆಗಳ ಚುನಾವಣೆ ಡಿಸೆಂಬರ್ 2026ರಲ್ಲಿ ನಡೆಸುವಂತೆ ಸುಪ್ರೀಂ ಕೋರ್ಟ್ ಜುಲೈ 17ರಂದು ಸ್ಪಷ್ಟ ನಿರ್ದೇಶನ ನೀಡಿತ್ತು. ಕರ್ನಾಟಕದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆ ನವೆಂಬರ್‌ನಲ್ಲಿ ಪೂರ್ಣಗೊಳ್ಳಲಿದೆ ಎಂಬುದನ್ನು ಪರಿಗಣಿಸಿದ ನ್ಯಾಯಪೀಠ, ಐದು ಪಾಲಿಕೆಗಳ ಚುನಾವಣೆಗಳನ್ನು ಡಿಸೆಂಬರ್‌ನಲ್ಲಿ ನಡೆಸುವಂತೆ ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಚುನಾವಣಾ ಸಿದ್ಧತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ ಎಂದು ಮೂಲಗಳು ಉಲ್ಲೇಖಿಸಿವೆ. ಜಿಬಿಎ ಮುಖ್ಯ ಆಯುಕ್ತರು ಹಾಗೂ ಐದು ನಗರ ಪಾಲಿಕೆಗಳ ಆಯುಕ್ತರ ಮಟ್ಟದಲ್ಲಿ ಚುನಾವಣಾ ಸಂಬಂಧಿತ ಸಿದ್ಧತೆಗಳಿಗೆ ಒತ್ತು ನೀಡಲಾಗುತ್ತಿದೆ.

### ಎಸ್‌ಐಆರ್ ಬಳಿಕ ಚುನಾವಣಾ ಪ್ರಕ್ರಿಯೆ

ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಈಗ ಚುನಾವಣಾ ಸಿದ್ಧತೆಯ ಪ್ರಮುಖ ಹಂತವಾಗಿದೆ. ಜಿಬಿಎ ವ್ಯಾಪ್ತಿಯಲ್ಲೂ ವಿಚಾರದಲ್ಲಿ ವಿಚಾರಣೆ ಮತ್ತು ದಾಖಲೆ ಪರಿಶೀಲನೆ ಮುಂದುವರಿದಿದೆ. ಸೆ.25ರಂದು ಜಿಬಿಎ ಮುಖ್ಯ ಆಯುಕ್ತ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ 13.40 ಲಕ್ಷ ಪ್ರಕರಣಗಳ ವಿಚಾರಣೆ ಪೂರ್ಣಗೊಂಡಿದ್ದು, 2.56 ಲಕ್ಷ ಪ್ರಕರಣಗಳು ಬಾಕಿ ಇರುವುದಾಗಿ ತಿಳಿಸಿದ್ದಾರೆ. ಅಧಿಕೃತ ವೆಬ್‌ಸೈಟ್‌ನಲ್ಲೂ ಕರಡು ಪಟ್ಟಿ, ಅಂತಿಮ ಮತದಾರರ ಪಟ್ಟಿ, ಕ್ಲೇಮ್ಸ್ ಆಬ್ಜೆಕ್ಷನ್ಸ್ ಹಾಗೂ ಚುನಾವಣಾ ಸಂಬಂಧಿತ ಮಾಹಿತಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ.ಪ್ರಕ್ರಿಯೆ ಪೂರ್ಣಗೊಂಡು ಅಂತಿಮ ಮತದಾರರ ಪಟ್ಟಿ ಸಿದ್ಧವಾದ ಬಳಿಕ ಜಿಬಿಎ ಚುನಾವಣಾ ಪ್ರಕ್ರಿಯೆ ಮತ್ತಷ್ಟು ವೇಗ ಪಡೆಯುವ ನಿರೀಕ್ಷೆ ಇದೆ.

### 5 ಪಾಲಿಕೆಗಳಿಗೆ ಒಂದೇ ಚುನಾವಣಾ ಕಸರತ್ತು

ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ 369 ವಾರ್ಡ್‌ಗಳ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಯಬೇಕಿದೆ. ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಡಿಸೆಂಬರ್ ಅಂತ್ಯದೊಳಗೆ ಚುನಾವಣೆ ಪೂರ್ಣಗೊಳಿಸುವ ಜವಾಬ್ದಾರಿ ರಾಜ್ಯ ಚುನಾವಣಾ ಆಯೋಗ, ಜಿಬಿಎ ಹಾಗೂ ಸರ್ಕಾರದ ಮೇಲಿದೆ. ಇದೀಗ ಅಂತಿಮ ಹಂತದತ್ತ ಸಾಗುತ್ತಿರುವ ಬೆನ್ನಲ್ಲೇ ಆಡಳಿತಾತ್ಮಕ ಸಿದ್ಧತೆಗಳೂ ಸಮಾನಾಂತರವಾಗಿ ನಡೆಯುತ್ತಿರುವುದು ಬೆಂಗಳೂರು ನಗರಪಾಲಿಕೆ ಚುನಾವಣೆ ಸಮೀಪಿಸುತ್ತಿರುವ ಸೂಚನೆ ಎಂಬ ಚರ್ಚೆ ರಾಜಕೀಯ ಹಾಗೂ ಆಡಳಿತ ವಲಯದಲ್ಲಿ ಆರಂಭವಾಗಿದೆ. ಆದರೆ, ಡಿಸೆಂಬರ್‌ನಲ್ಲಿ ಚುನಾವಣೆ ನಡೆಯುವುದು ನ್ಯಾಯಾಲಯದ ನಿರ್ದೇಶನವಾಗಿದ್ದರೂ, ನಿಖರ ಚುನಾವಣಾ ದಿನಾಂಕವನ್ನು ರಾಜ್ಯ ಚುನಾವಣಾ ಆಯೋಗವೇ ಅಧಿಕೃತವಾಗಿ ಪ್ರಕಟಿಸಬೇಕಿದೆ.

# ಸೋಲಿಗೆ ನೆಪ ಹುಡುಕುವುದೇ ಕಾಂಗ್ರೆಸ್ ಕಾಯಕ: ಮಾಜಿ ಸಚಿವ ಸುರೇಶ್ ಕುಮಾರ್

**ಬೆಂಗಳೂರು, ಸೆ. 26:** ಕಾಂಗ್ರೆಸ್ ಪಕ್ಷವು ತನ್ನ ಸೋಲಿಗೆ ಸದಾ ಯಾವುದಾದರೂ ನೆಪ ಹುಡುಕುತ್ತಲೇ ಇರುತ್ತದೆ ಎಂದು ರಾಜಾಜಿನಗರ ಬಿಜೆಪಿ ಶಾಸಕ ಹಾಗೂ ಮಾಜಿ ಸಚಿವ ಎಸ್. ಸುರೇಶ್ ಕುಮಾರ್ ಆರೋಪಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರ ವಿರುದ್ಧ ಕಾಂಗ್ರೆಸ್ ನಡೆಸುತ್ತಿರುವ ಪ್ರತಿಭಟನೆಯೂ ತನ್ನ ಸೋಲಿಗೆ ನೆಪ ಹುಡುಕುವ ಮತ್ತೊಂದು ಪ್ರಯತ್ನವಾಗಿದೆ ಎಂದು ಹೇಳಿದ್ದಾರೆ.

ಜ್ಞಾನೇಶ್ ಕುಮಾರ್ ಮತ್ತು ಎಸ್‌ಐಆರ್ ಪ್ರಕ್ರಿಯೆ ಆರಂಭವಾಗುವುದಕ್ಕೂ ಬಹಳ ಹಿಂದೆಯೇ ಕಾಂಗ್ರೆಸ್ ಸರಣಿ ಚುನಾವಣೆಗಳಲ್ಲಿ ಸೋಲು ಕಂಡಿದೆ ಎಂಬುದನ್ನು ಕಾಂಗ್ರೆಸ್ ಅರಿತುಕೊಳ್ಳಬೇಕು. ತನ್ನ ಸೋಲಿಗೆ ಚುನಾವಣಾ ಆಯೋಗ ಅಥವಾ ಎಸ್‌ಐಆರ್ ಅನ್ನು ದೂಷಿಸುವ ಬದಲು ಕಾಂಗ್ರೆಸ್ ಪ್ರಾಮಾಣಿಕ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸುರೇಶ್ ಕುಮಾರ್ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗ, ಎಲೆಕ್ಟ್ರಾನಿಕ್ ವೋಟಿಂಗ್ ಯಂತ್ರ ಚುನಾವಣಾ ಅಧಿಕಾರಿಗಳು ಹಾಗೂ ಎಸ್‌ಐಆರ್ ಸೇರಿದಂತೆ ಎಲ್ಲರನ್ನೂ ದೂಷಿಸುತ್ತದೆಯೇ ಹೊರತು, ತನ್ನದೇ ತಪ್ಪುಗಳನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ ಎಂದು ಅವರು ಆರೋಪಿಸಿದ್ದಾರೆ.

ಜ್ಞಾನೇಶ್ ಕುಮಾರ್ ವಿರುದ್ಧ ಕಾಂಗ್ರೆಸ್ ಇಂದು ನಡೆಸುತ್ತಿರುವ ಪ್ರತಿಭಟನೆ ಕೊನೆಗೆ ಸಂಪೂರ್ಣ ವ್ಯರ್ಥವಾಗುವ ದುಬಾರಿ ಕಸರತ್ತಾಗಿ ಪರಿಣಮಿಸಲಿದೆ. 1984-85ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಕೇವಲ ಎರಡು ಸ್ಥಾನಗಳನ್ನು ಗೆದ್ದು ಅತ್ಯಂತ ಹೀನಾಯ ಸೋಲು ಕಂಡಿದ್ದನ್ನೂ ಸುರೇಶ್ ಕುಮಾರ್ ನೆನಪಿಸಿಕೊಂಡಿದ್ದಾರೆ. ಆಗ ನಾವು ಯಾರನ್ನೂ ದೂಷಿಸಲಿಲ್ಲ. ಬದಲಾಗಿ ಆತ್ಮಾವಲೋಕನ ಮಾಡಿಕೊಂಡು, ತಿದ್ದುಪಡಿ ಕ್ರಮಗಳನ್ನು ಕೈಗೊಂಡೆವು. ತಾಳ್ಮೆ ಮತ್ತು ಸತತ ಪರಿಶ್ರಮದಿಂದ ಪಕ್ಷವನ್ನು ಹಂತಹಂತವಾಗಿ ಕಟ್ಟಿದೆವು. ಇಂದು ಬಿಜೆಪಿ ವಿಶ್ವದ ಅತಿದೊಡ್ಡ ಪಕ್ಷವಾಗಿದೆ ಮತ್ತು ಸಕಾರಾತ್ಮಕ ಮತದಾನದ ಮೂಲಕ ಚುನಾವಣೆಗಳನ್ನು ಗೆಲ್ಲುತ್ತಿದೆ ಎಂದು ಹೇಳಿದ್ದಾರೆ.

# ಭಜನೆ, ಭಕ್ತಿ ಪರಂಪರೆಗೆ ಪ್ರಿಯಾಂಕ್ ಖರ್ಗೆ ಅಪಮಾನ: ಬಿಜೆಪಿ ಟೀಕೆ

**ಬೆಂಗಳೂರು, ಸೆ.26:** ರಾಷ್ಟ್ರ ರಾಜಧಾನಿಯಲ್ಲಿ ಶುಕ್ರವಾರ ನಡೆದ ಭಜನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹೇಳಿಕೆ ನೀಡಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆಗೆ ಬಿಜೆಪಿ ತಿರುಗೇಟು ನೀಡಿದೆ.


ಕಾಂಗ್ರೆಸ್ ಭಾರತೀಯ ಪರಂಪರೆಗೆ ಅವಮಾನ ಮಾಡುತ್ತಿದೆ ಎಂದು ಆರೋಪಿಸಿದೆ. ಪ್ರಧಾನಿ ಭಜನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಮಯವಿದ್ದರೂ ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ಮೌನವಾಗಿದ್ದಾರೆ ಎಂಬ ಸಚಿವರ ಹೇಳಿಕೆಗೆ ಬಿಜೆಪಿ ಕಿಡಿಕಾರಿದೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಿಯಾಂಕ್ ಖರ್ಗೆ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಜನೆ ಕ್ಲಬ್ಬಿಂಗ್‌ಗೆ ಸಮಯವಿದೆ, ಆದರೆ ಚುನಾವಣಾ ಆಯೋಗದ ಮೂಲಕ ಪ್ರಜಾಪ್ರಭುತ್ವ ಹತ್ತಿಕ್ಕುವ ಕುರಿತಾದ ಗಂಭೀರ ಪ್ರಶ್ನೆಗಳಿಗೆ ಉತ್ತರಿಸಲು ಸಮಯವಿಲ್ಲ. ಪ್ರಧಾನಿ ಕಳೆದ 13 ವರ್ಷಗಳಿಂದ ಪ್ರಶ್ನೆಗಳಿಂದ ತಪ್ಪಿಸಿಕೊಂಡು ಬಂದಿದ್ದಾರೆ ಎಂದು ಹೇಳಿದ್ದಾರೆ. ಕಳೆದ 13 ವರ್ಷಗಳಿಂದ ಒಂದು ಪರಿಚಿತ ಮಾದರಿ ಕಂಡುಬರುತ್ತಿದೆ. ಸರ್ಕಾರ ಕಠಿಣ ಪ್ರಶ್ನೆಗಳನ್ನು ಎದುರಿಸಿದಾಗ, ಅವುಗಳಿಗೆ ಉತ್ತರಿಸುವ ವಿಷಯದಲ್ಲಿ ಪ್ರಧಾನಿ ಕಾಣುವುದಿಲ್ಲ. ಸಂಭ್ರಮಾಚರಣೆಗಳಿಗೆ ಅವರು ಇರ್ತಾರೆ. ಆದರೆ ಹೊಣೆಗಾರಿಕೆಯ ವಿಷಯದಲ್ಲಿ ಅವರು ಮೌನಿಯಾಗಿರುತ್ತಾರೆ ಎಂದು ವಾಗ್ದಾಳಿ ನಡೆಸಿದ್ದಾರೆ. ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಬಿಜೆಪಿ, ಸಚಿವರು ಭಾರತದ 'ಭಜನೆ' ಮತ್ತು 'ಭಕ್ತಿ'ಯ ಪರಂಪರೆಯನ್ನು ಅಪಹಾಸ್ಯ ಮಾಡುತ್ತಿದ್ದಾರೆ ಮತ್ತು ಅವಮಾನಿಸುತ್ತಿದ್ದಾರೆ ಎಂದು ಆರೋಪಿಸಿದೆ.

# ಸೆ.30ರೊಳಗೆ ನೋಂದಣಿ ಆಗದಿದ್ದರೆ ಅನಧಿಕೃತ ಹೋಂಸ್ಟೇಗಳಿಗೆ ಬೀಗ

## ಪ್ರವಾಸೋದ್ಯಮ ಇಲಾಖೆ ಗಡುವು, ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಲು ಅವಕಾಶ

ಬೆಂಗಳೂರು, ಸೆ.26: ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡುವ ಹಾಗೂ ಸ್ಥಳೀಯ ಮಟ್ಟದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಪ್ರಮುಖ ನಿರ್ಧಾರ ಕೈಗೊಂಡಿದೆ. ರಾಜ್ಯಾದ್ಯಂತ ಪ್ರಸ್ತುತ ಅನಧಿಕೃತವಾಗಿ ಕಾರ್ಯಾಚರಿಸುತ್ತಿರುವ ಹೋಂ ಸ್ಟೇಗಳನ್ನು ಅಧಿಕೃತಗೊಳಿಸಲು ಪ್ರವಾಸೋದ್ಯಮ ಇಲಾಖೆಯು ಆನ್‌ಲೈನ್ ನೋಂದಣಿಗೆ ಅವಕಾಶ ಕಲ್ಪಿಸಿದ್ದು, ಸೆಪ್ಟೆಂಬರ್ 30ರೊಳಗೆ ಅರ್ಜಿ ಸಲ್ಲಿಸಲು ಅಂತಿಮ ಗಡುವು ನೀಡಿದೆ.



ರಾಜ್ಯದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಹೋಂ ಸ್ಟೇಗಳು ಯಾವುದೇ ಸೂಕ್ತ ಪರವಾನಗಿ ಇಲ್ಲದೆ ನಡೆಯುತ್ತಿರುವುದನ್ನು ಪ್ರವಾಸೋದ್ಯಮ ಇಲಾಖೆ ಗುರುತಿಸಿದೆ. ಈ ಹಿನ್ನೆಲೆಯಲ್ಲಿ ನೋಂದಣಿ ಪ್ರಕ್ರಿಯೆ ಆರಂಭಿಸಲಾಗಿದ್ದು, ಸದ್ಯ ಪ್ರಗತಿ ಮಂದಗತಿಯಲ್ಲಿದೆ. ಆದಾಗ್ಯೂ, ವಿಜಯನಗರ ಜಿಲ್ಲೆಯಿಂದ ಗರಿಷ್ಠ 291 ಅರ್ಜಿಗಳು ಸಲ್ಲಿಕೆಯಾಗುವ ಮೂಲಕ ಮುಂಚೂಣಿಯಲ್ಲಿದೆ. ನೋಂದಣಿ ವೇಗಗೊಳಿಸಲು ಪ್ರವಾಸೋದ್ಯಮ ಪೂರಕ ಜಿಲ್ಲೆಗಳನ್ನು ಕೇಂದ್ರೀಕರಿಸಿ ಮಾಲೀಕರಿಗೆ ಜಾಗೃತಿ ಹಾಗೂ ತಿಳಿವಳಿಕೆ ಮೂಡಿಸುವ ಕೆಲಸ ನಡೆಯುತ್ತಿದೆ.

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ (ಹವಾಮಾ) ವ್ಯಾಪ್ತಿಗೆ ಒಳಪಡುವ ಹನುಮನ ಜನ್ಮಭೂಮಿ ಅಂಜನಾದ್ರಿ ಹಾಗೂ ಆನೆಗೊಂದಿ ಭಾಗದ 15 ಹಳ್ಳಿಗಳಲ್ಲಿ ನಿಯಮಗಳು ಕಠಿಣವಾಗಿದ್ದವು. ಆದರೆ ಈಗ ವಿಶೇಷ ವಿನಾಯಿತಿ ನೀಡಲಾಗಿದ್ದು, ಗ್ರಾಮ ಪಂಚಾಯಿತಿ ಹಾಗೂ 'ಹವಾಮಾ'ದಿಂದ ಸೂಕ್ತ ಪರವಾನಗಿ ಪಡೆದು ನಿರ್ಮಿಸಿದ ಮನೆಗಳನ್ನು ನಿಗದಿತ ನಿಯಮಾವಳಿಗಳಡಿ ಹೋಂಸ್ಟೇಗಳಾಗಿ ಪರಿವರ್ತಿಸಲು ಅವಕಾಶ ನೀಡಲಾಗಿದೆ.ಕನಿಷ್ಠ 2 ಹಾಗೂ ಗರಿಷ್ಠ 6 ಕೊಠಡಿಗಳನ್ನು ಹೊಂದಿರುವ ಆಸ್ತಿ ಮಾಲೀಕರು ಮಾತ್ರ ಹೋಂಸ್ಟೇ ನೋಂದಣಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಉತ್ತಮ ವಾಸಸ್ಥಳ, ಕಟ್ಟಡ ಪರವಾನಗಿ ಹಾಗೂ ಭೂ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಪ್ರವಾಸಿಗರಿಗೆ ಸ್ಥಳೀಯರ ಮನೆಯಲ್ಲೇ ಹಣ ಪಾವತಿಸಿ ವಾಸ್ತವ್ಯ ಹೂಡಲು, ಸ್ಥಳೀಯ ಊಟ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ಈ ವ್ಯವಸ್ಥೆ ಸಹಕಾರಿಯಾಗಲಿದ್ದು, ಸ್ಥಳೀಯ ಮಟ್ಟದಲ್ಲಿ ಅಪಾರ ಉದ್ಯೋಗ ಸೃಷ್ಟಿಸಲಿದೆ.

ಸೆಪ್ಟೆಂಬರ್ 27ರ ವಿಶ್ವ ಪ್ರವಾಸೋದ್ಯಮ ದಿನದ ನಿಮಿತ್ತ, ಸೆ.29ರೊಳಗೆ ನೋಂದಣಿಯಾಗುವ ಹೋಂ ಸ್ಟೇಗಳಿಗೆ ಮಾನ್ಯತಾ ಪತ್ರ ನೀಡಲು ಕೊಪ್ಪಳ ಜಿಲ್ಲಾಡಳಿತ ಈಗಾಗಲೇ ಸಿದ್ಧತೆ ಮಾಡಿಕೊಂಡಿದೆ. ಆಸಕ್ತ ಮಾಲೀಕರು ಪ್ರವಾಸೋದ್ಯಮ ಇಲಾಖೆಯ ಅಧಿಕೃತ ವೆಬ್‌ಸೈಟ್ ಮೂಲಕ ತಕ್ಷಣ ಅರ್ಜಿ ಸಲ್ಲಿಸಬಹುದಾಗಿದೆ. ನಿಗದಿತ ಗಡುವಿನೊಳಗೆ ನೋಂದಣಿ ಮಾಡಿಕೊಳ್ಳದೆ, ಅನಧಿಕೃತವಾಗಿ ರೂಂ ಬುಕಿಂಗ್ ಮುಂದುವರಿಸುವ ಹೋಂ ಸ್ಟೇಗಳ ವಿರುದ್ಧ ಕಠಿಣ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

# ಕಾಫಿ, ಟೀ, ಊಟ, ತಿಂಡಿ ದರ ಏರಿಕೆ ಸಾಧ್ಯತೆ: ಹೋಟೆಲ್ ಮಾಲೀಕರ ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ಮಾಹಿತಿ

**ಬೆಂಗಳೂರು, ಸೆ.26:** ಹಾಲಿನ ದರ ಏರಿಕೆ ಕುರಿತು ರಾಜ್ಯದಲ್ಲಿ ಚರ್ಚೆ ತೀವ್ರಗೊಂಡಿರುವ ಬೆನ್ನಲ್ಲೇ ಬೆಂಗಳೂರಿನ ಹೋಟೆಲ್‌ಗಳಲ್ಲಿ ಕಾಫಿ, ಟೀ ಸೇರಿ ತಿಂಡಿ-ತಿನಿಸುಗಳ ಬೆಲೆ ಮತ್ತೊಮ್ಮೆ ಹೆಚ್ಚಾಗುವ ಸಾಧ್ಯತೆ ಎದುರಾಗಿದೆ. ಹಾಲಿನ ದರ ಏರಿಕೆಯ ಪ್ರಮಾಣವೇ ಹೋಟೆಲ್‌ಗಳ ಮುಂದಿನ ನಿರ್ಧಾರಕ್ಕೆ ಪ್ರಮುಖ ಅಂಶವಾಗಲಿದೆ ಎಂದು ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಗೌರವಾಧ್ಯಕ್ಷ ಪಿ.ಸಿ. ರಾವ್ ತಿಳಿಸಿದ್ದಾರೆ.



ಪ್ರತಿ ಲೀ.ಗೆ 2-3ರಷ್ಟು ಮಾತ್ರ ಹಾಲಿನ ದರ ಹೆಚ್ಚಾದರೆ, ಅದರ ಹೊರೆ ಗ್ರಾಹಕರ ಮೇಲೆ ಹಾಕದೆ ಹೋಟೆಲ್‌ಗಳು ನಿರ್ವಹಿಸಬಹುದು. ಆದರೆ 45 ಅಥವಾ ಅದಕ್ಕಿಂತ ಹೆಚ್ಚಿನ ಏರಿಕೆ ಕಂಡುಬಂದರೆ ಕಾಫಿ, ಟೀ, ತಿಂಡಿ ಮತ್ತು ಊಟದ ದರ ಪರಿಷ್ಕರಿಸುವುದು ಅನಿವಾರ್ಯವಾಗಬಹುದು ಎಂಬುದು ಹೋಟೆಲ್ ಉದ್ಯಮದ ನಿಲುವು.

ಇದು ಹೋಟೆಲ್‌ಗಳ ಬೆಲೆ ಏರಿಕೆಯ ಮೊದಲ ಹಂತವಲ್ಲ. ಸೆಪ್ಟೆಂಬರ್ ಆರಂಭದಲ್ಲೇ ಬೆಂಗಳೂರಿನ ಕೆಲವು ಹೋಟೆಲ್‌ಗಳು ಮತ್ತು ಟೀ ಅಂಗಡಿಗಳಲ್ಲಿ ಕಾಫಿ-ಟೀ ದರವನ್ನು 23ರಷ್ಟು ಹೆಚ್ಚಿಸಿದ್ದವು.

ಸಕ್ಕರೆ, ಬೆಲ್ಲ ಸೇರಿದಂತೆ ವಿವಿಧ ಕಚ್ಚಾ ವಸ್ತುಗಳ ಬೆಲೆ ಏರಿಕೆಯನ್ನು ಇದಕ್ಕೆ ಕಾರಣವಾಗಿ ಹೋಟೆಲ್ ಉದ್ಯಮದವರು ಉಲ್ಲೇಖಿಸಿದ್ದರು. ಕೆಲವು ಕಡೆ ರೂ.20-30 ರಷ್ಟಿದ್ದ ಕಾಫಿ ಅಥವಾ ಟೀ ರೂ.22-33ರ ಮಟ್ಟಕ್ಕೆ ಏರಿದ್ದರೆ, ಸಣ್ಣ ಹೋಟೆಲ್‌ಗಳಲ್ಲಿ 15ರ ಪಾನೀಯ ರೂ.16-18ರಷ್ಟಾಗಿದೆ ಎಂದು ವರದಿಯಾಗಿತ್ತು. ಹೀಗಾಗಿ ಈಗ ಹಾಲಿನ ಬೆಲೆಯಲ್ಲೂ ದೊಡ್ಡ ಪ್ರಮಾಣದ ಏರಿಕೆ ನಡೆದರೆ, ಗ್ರಾಹಕರಿಗೆ ಒಂದೇ ತಿಂಗಳಲ್ಲಿ ಮತ್ತೊಂದು ಬೆಲೆ ಏರಿಕೆಯ ಹೊರೆ ಬೀಳುವ ಸಾಧ್ಯತೆ ಇದೆ. ಇತ್ತೀಚೆಗಷ್ಟೇ ಜಾಗತಿಕ ವಿದ್ಯಮಾನಗಳು ಹಾಗೂ ಗ್ಯಾಸ್ ಪೂರೈಕೆಯಲ್ಲಿ ಉಂಟಾದ ಅಭಾವದ ಸಂದರ್ಭದಲ್ಲಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಾದಾಗ ಹೋಟೆಲ್‌ಗಳು ದರ ಪರಿಷ್ಕರಣೆ ಮಾಡಿದ್ದವು.

ಈ ಹಿಂದೆ ಜಾಗತಿಕ ಸಂಘರ್ಷಗಳ ಸಂದರ್ಭದಲ್ಲಿ ವಾಣಿಜ್ಯ ಅಡುಗೆ ಅನಿಲ ಕೊರತೆ ಮತ್ತು ತೀವ್ರ ಬೆಲೆ ಏರಿಕೆಯಾದಾಗ ಹೋಟೆಲ್‌ಗಳು ತಿಂಡಿ, ಊಟ ಹಾಗೂ ಪಾನೀಯಗಳ ದರವನ್ನು ಹೆಚ್ಚಿಸಿದ್ದವು. ಆ ದರ ಏರಿಕೆ ಮುಂದುವರಿದಿರುವುದರಿಂದ, ಗ್ರಾಹಕರಿಗೆ ಮತ್ತೆ ಬೆಲೆ ಏರಿಕೆಯ ಬಿಸಿ ಮುಟ್ಟಿಸಲು ಹೋಟೆಲ್ ಮಾಲೀಕರು ಇಷ್ಟಪಡುತ್ತಿಲ್ಲ. ಹೀಗಾಗಿ ಹಾಲಿನ ದರ ಏರಿಕೆಯನ್ನು ನಿಯಂತ್ರಿಸುವಂತೆ ಕೋರಿ ಹೋಟೆಲ್ ಸಂಘಟನೆಯು ಶೀಘ್ರದಲ್ಲೇ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಲು ತೀರ್ಮಾನಿಸಿದೆ.

# ಪ್ರದೋಷ್ ಮಾಫಿಸಾಕ್ಷಿ ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಲು ದರ್ಶನ್ ನಿರ್ಧಾರ

**ಬೆಂಗಳೂರು, ಸೆ.26:** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ಅವರು ತಮ್ಮ ವಿರುದ್ಧವೇ ತಿರುಗಿಬಿದ್ದು, ಮಾಫಿಸಾಕ್ಷಿ ಹೇಳಲು ನಿರ್ಧರಿಸಿರುವ ಪ್ರದೋಷ್ ರಾವ್ ನನ್ನು ತಡೆಯಲು ಹಲವು ಕಸರತ್ತುಗಳನ್ನು ನಡೆಸುತ್ತಿದ್ದಾರೆ. ಒಂದಾದ ಮೇಲೊಂದರಂತೆ ಪ್ರಯತ್ನ ನಡೆಸುತ್ತಿದ್ದು, ಇದೀಗ ಮಾಫಿಸಾಕ್ಷಿ ಹೇಳಿಕೆ ದಾಖಲು ಒಂದು ವಾರ ಮುಂದೂಡುವಂತೆ ಮತ್ತೊಂದು ಅರ್ಜಿ ಸಲ್ಲಿಸಿದ್ದಾರೆ. ಪ್ರದೋಷ್ ಮಾಫಿ ಸಾಕ್ಷಿಯಾಲು ಒಪ್ಪಿಗೆ ನೀಡಿರುವ 59ನೇ ಸಿಸಿಎಚ್ ಕೋರ್ಟ್, ಇದೀಗ ಸಾಕ್ಷಿ ಹೇಳಿಕೆ ದಾಖಲಿಸುವ ಪ್ರಕ್ರಿಯೆಗೆ ಸೆಪ್ಟೆಂಬರ್ 28ರಂದು ದಿನಾಂಕ ನಿಗದಿ ಮಾಡಿದೆ. ಇದರಿಂದ ತೀವ್ರ ಆತಂಕಕ್ಕೆ ಒಳಗಾದ ದರ್ಶನ್, ಮಾಫಿಸಾಕ್ಷಿ ಅದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ನಿರ್ಧರಿಸಿದ್ದಾರೆ. ಮಾಫಿಸಾಕ್ಷಿ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಅವಕಾಶ ಕೋರಿದ್ದೇವೆ. ಹೀಗಾಗಿ ಮಾಫಿಸಾಕ್ಷಿ ಹೇಳಿಕೆ ದಾಖಲು ದಿನಾಂಕವನ್ನು ಒಂದು ವಾರ ಮುಂದೂಡಿಕೆ ಮಾಡುವಂತೆ ಕೋರಿ ದರ್ಶನ್ ಪರ ವಕೀಲರು ಅರ್ಜಿ ಸಲ್ಲಿಸಿದ್ದಾರೆ.

ಇದಕ್ಕೂ ಮುನ್ನ ಮಾಫಿಸಾಕ್ಷಿ ಹೇಳಿಕೆ ವಿಚಾರವಾಗಿ ಸೆಷನ್ಸ್ ಕೋರ್ಟ್‌ನ ಆದೇಶ ಪ್ರಶ್ನೆ ಮಾಡಿ, ದರ್ಶನ್ ಅವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಕೆ ಮಾಡಿದ್ದರು. ವಾದ, ಪ್ರತಿವಾದ ಆಲಿಸಿದ್ದ ಹೈಕೋರ್ಟ್ ಮಾಫಿ ಸಾಕ್ಷಿ ಹೇಳಿಕೆ ಪ್ರಶ್ನೆ ಮಾಡುವಂತಿಲ್ಲ, ಬದಲಾಗಿ ಆ ಪ್ರಕ್ರಿಯೆಯಲ್ಲಿ ಲೋಪ ಕಂಡು ಬಂದ್ರೆ ಮಾತ್ರ ಪ್ರಶ್ನೆ ಮಾಡಬಹುದು ಎಂದು ಹೇಳಿ ಅರ್ಜಿ ವಜಾ ಮಾಡಿತ್ತು.

# ಮೋದಿ ವಿರುದ್ಧ ಹೇಳಿಕೆ: ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್

**ಬೆಂಗಳೂರು, ಸೆ.26:** ವಾಟ್ಸ್‌ಆಪ್ ಗ್ರೂಪ್‌ನಲ್ಲಿ ಬಂದ ವಿಡಿಯೋ ನೋಡಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹೇಳಿಕೆ ನೀಡಿದ ಆರೋಪದಡಿ ಬೆಳಗಾವಿ ಜಿಲ್ಲೆ ಅಥಣಿಯ ಅಂಗಡಿ ಮಾಲೀಕರೊಬ್ಬರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಮತ್ತು ಅದಕ್ಕೆ ಸಂಬಂಧಿಸಿದ ನ್ಯಾಯಿಕ ಪ್ರಕ್ರಿಯೆಯನ್ನು ಹೈಕೋರ್ಟ್‌ನ ಧಾರವಾಡ ಪೀಠ ಈಚೆಗೆ ರದ್ದುಪಡಿಸಿದೆ. ತನ್ನ ವಿರುದ್ಧದ ಎಫ್‌ಐಆರ್ ಮತ್ತು ಅಥಣಿ ಕಿರಿಯ ವಿಭಾಗದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿನ ವಿಚಾರಣೆ ರದ್ದುಪಡಿಸಬೇಕು ಎಂದು ಕೋರಿ ಇಮ್ತಿಯಾಜ್ ನೂರುದ್ದೀನ್ ಚಿಂಚಲಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಟಿ ವೆಂಕಟೇಶ್ ನಾಯಕ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ.

ಶಾಂತಿ, ಸುವ್ಯವಸ್ಥೆ ಹದಗಡಿಸುವ ರೀತಿಯಲ್ಲಿ ಅರ್ಜಿದಾರನು ದೂರುದಾರರನ್ನು ಉದ್ದೇಶಪೂರ್ವಕವಾಗಿ ಅವಮಾನಿಸಿದ ಅಥವಾ ನಿಂದಿಸಿದ ನಿರ್ದಿಷ್ಟ ಆರೋಪಗಳಿಲ್ಲ ಎಂದು ನ್ಯಾಯಾಲಯ ಆದೇಶದಲ್ಲಿ ಹೇಳಿದೆ. ಘಟನೆ ನಡೆದಿರುವುದು 2026ರ ಜನವರಿ 7ರಂದು. ಆದರೆ, ಜನವರಿ 11ರಂದು ದೂರು ದಾಖಲಿಸಲಾಗಿದೆ. ನಾಲ್ಕು ದಿನಗಳ ವಿಳಂಬಕ್ಕೆ ಯಾವುದೇ ಸೂಕ್ತ ಮತ್ತು ಸಮಂಜಸ ಕಾರಣ ನೀಡಿಲ್ಲ ಮತ್ತು ಅರ್ಜಿದಾರರು ದೂರುದಾರರನ್ನು ಉದ್ದೇಶಪೂರ್ವಕವಾಗಿ ನಿಂದಿಸಿದ್ದಾರೆ ಶಾಂತಿ ಭಂಗ ಉಂಟುಮಾಡಲು ಪ್ರಚೋದಿಸಿದ್ದಾರೆ ಎಂಬುದಕ್ಕೆ ಯಾವುದೇ ಸೂಕ್ತ ಆಧಾರಗಳಿಲ್ಲ ಎಂಬ ಅಭಿಪ್ರಾಯದೊಂದಿಗೆ ಪೀಠ ಪ್ರಕರಣ ರದ್ದುಪಡಿಸಿದೆ.

# ಡಾ.ಮನಮೋಹನ್ ಸಿಂಗ್‌ಗೆ ಭಾರತರತ್ನ ನೀಡುವಂತೆ ಆಗ್ರಹ

**ಬೆಂಗಳೂರು, ಸೆ.26:** ಗಂಭೀರ ಆರ್ಥಿಕ ಬಿಕ್ಕಟ್ಟಿನಲ್ಲಿ ಮುಳುಗಿದ್ದ ಭಾರತ ದೇಶವನ್ನು ಕ್ರಾಂತಿಕಾರಕ ಸುಧಾರಣೆಯ ಮೂಲಕ ಅಗಾಧ ಪ್ರಗತಿಯತ್ತ ಮುನ್ನಡೆಸಿದ ಡಾ.ಮನಮೋಹನ್ ಸಿಂಗ್ ರವರಿಗೆ ಮರಣೋತ್ತರ ಭಾರತರತ್ನ ಗೌರವ ನೀಡಬೇಕೆಂದು ಭಾರತೀಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ (ಐಸೆಕ್) ಹಿರಿಯ ಪ್ರಾಧ್ಯಾಪಕ ಪ್ರೊ. ಕೃಷ್ಣರಾಜ್ ಒತ್ತಾಯಿಸಿದ್ದಾರೆ.



ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ದಿವಂಗತ ಮಾಜಿ ಪ್ರಧಾನಿ ಹಾಗೂ ಅರ್ಥಶಾಸ್ತ್ರಜ್ಞ ಡಾ. ಮನಮೋಹನ್ ಸಿಂಗ್ ಅವರ 94ನೇ ಜನ್ಮದಿನ ವಾರ್ಷಿಕೋತ್ಸವದಲ್ಲಿ ಮಾತನಾಡಿ, ಕೇಂದ್ರ ಹಣಕಾಸು ಸಚಿವರಾಗಿ ಅವರು 1991ರಲ್ಲಿ ಜಾರಿಗೊಳಿಸಿದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ನೀತಿಯ ಫಲವಾಗಿ ಭಾರತ ದೇಶ ಇಂದು ಜಗತ್ತಿನಲ್ಲೇ ಅತಿವೇಗವಾಗಿ ಬೆಳೆಯುತ್ತಿರುವ ಬಲಿಷ್ಠ ಆರ್ಥಿಕತೆಯಾಗಿ ಹೊರಹೊಮ್ಮಿದೆ ಎಂದು ವಿಶ್ಲೇಷಿಸಿದರು.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ , ಶಿಕ್ಷಣ ಹಕ್ಕು, ಮಾಹಿತಿ ಹಕ್ಕು ಮುಂತಾದ ಅನೇಕ ಮಹತ್ವದ ಶಾಸನಗಳ ಮೂಲಕ ಡಾ. ಮನಮೋಹನ್ ಸಿಂಗ್ ದೇಶದ ಸುಸ್ಥಿರ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದರೆಂದು ಅವರು ವಿವರಿಸಿದರು.

ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ಸೌಮ್ಯ ಸ್ವಭಾವದ, ಉದಾತ್ತ ಆದರ್ಶಗಳ ಶ್ರೇಷ್ಠ ವ್ಯಕ್ತಿಯಾದ ಡಾ.ಮನಮೋಹನ್ ಸಿಂಗ್ ಜೀವನಗಾಥೆ ತೆರೆದ ಪುಸ್ತಕವಾಗಿದ್ದು ಮಾಧ್ಯಮ ಮತ್ತು ಸಾರ್ವಜನಿಕ ವಿಮರ್ಶೆಗೆ ಅವರು ಸದಾ ಮುಕ್ತರಾಗಿದ್ದರೆಂದು ಪ್ರೊ. ಕೃಷ್ಣರಾಜ್ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ.ರಮೇಶ್.ಬಿ. ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ ಡಾ.ಮನಮೋಹನ್ ಸಿಂಗ್ ಅಧ್ಯಯನ ಕೇಂದ್ರ ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿದೆ ಎಂದು ಪ್ರಕಟಿಸಿದರು.

ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದ ಡಾ. ಮನಮೋಹನ್ ಸಿಂಗ್ ಉನ್ನತ ಶಿಕ್ಷಣದ ವಿಸ್ತರಣೆ, ಗುಣಮಟ್ಟ ಸುಧಾರಣೆಗೆ ಅಮೂಲ್ಯ ಕೊಡುಗೆ ನೀಡಿರುವರೆಂದು ಅವರು ಸ್ಮರಿಸಿದರು.

ಸಾರ್ವಜನಿಕ ವಿಶ್ವವಿದ್ಯಾಲಯಗಳ ಸಬಲೀಕರಣ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಒತ್ತು ನೀಡುವ ಮೂಲಕ ಒಟ್ಟಾರೆ ದಾಖಲಾತಿ ನಿಷ್ಪತ್ತಿ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿ ದುರ್ಬಲ ವರ್ಗದ ಮಕ್ಕಳು ಮತ್ತು ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಪಡೆಯಲು ಡಾ.ಮನಮೋಹನ್ ಸಿಂಗ್ ನೆರವಾದರೆಂದು ಪ್ರೊ.ರಮೇಶ್.ಬಿ. ಅಭಿಪ್ರಾಯಪಟ್ಟರು.

ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ. ಬಿ.ಕುಡೇನಟ್ಟಿ, ಡೀನರಾದ ಪ್ರೊ ಜ್ಯೋತಿ ವೆಂಕಟೇಶ್ , ಪ್ರೊ.ಕೆ.ಆರ್.ಜಲಜಾ, ಪ್ರೊ. ಎಂ.ನಿರ್ಮಲ ಹಾಗೂ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಉಪಸ್ಥಿತರಿದ್ದರು. ಪ್ರೊ.ರಿತಿಕಾ ಸಿನ್ಹಾ ಪ್ರಾಸ್ತಾವಿಕ ಭಾಷಣ ಮಾಡಿದರು. ಉಪನ್ಯಾಸಕರಾದ ಡಾ.ದೀಕ್ಷಾ.ಎಸ್. ಕಾರ್ಯಕ್ರಮ ನಿರೂಪಿಸಿದರು.

ಸಮಾರಂಭದ ಅಂಗವಾಗಿ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ವಿವಿಧ ಪ್ರತಿಭಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.



ಶನಿವಾರ ಹುಬ್ಬಳ್ಳಿಯ ಹೊಸೂರಿನಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆ ನಡೆಯಿತು.

# ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಪುನಃಶ್ಚೇತನ: ಸಿಎಂಗೆ ಮನವಿ

**ಬೀದರ, ಸೆ. 26:** ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಹಳ್ಳಿಖೇಡ-ಬಿ ಗ್ರಾಮದಲ್ಲಿರುವ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಕಳೆದ ಹಲವು ವರ್ಷಗಳಿಂದ ಬಂದ್ ಆಗಿದ್ದು, ಕಾರ್ಖಾನೆ ಪುನಶ್ಚೇತನಗೊಳಿಸಬೇಕೆಂದು ಆಗ್ರಹಿಸಿ ಮಾಜಿ ಸಚಿವ ರಾಜಶೇಖರ ಪಾಟೀಲ್ ಹುಮನಾಬಾದ್ ನೇತೃತ್ವದ ನಿಯೋಗ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರಿಗೆ ಭೇಟಿಯಗಿ ಮನವಿ ಸಲ್ಲಿಸಿತು.

ನಂತರ ಮಾಜಿ ಸಚಿವ ರಾಜಶೇಖರ ಪಾಟೀಲ ಮಾತನಾಡಿ, ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಜಿಲ್ಲೆಯ ಜೀವನಾಡಿಯಾಗಿದೆ. ಕಾರ್ಖಾನೆ ಬಂದ್ ಆಗಿದ್ದರಿಂದ ಜಿಲ್ಲೆಯ ಕಬ್ಬು ಬೆಳೆಗಾರರು ಹಾಗೂ ಕಾರ್ಮಿಕರು ಸಂಕಷ್ಟದಲ್ಲಿ ಇದ್ದಾರೆ.



ಹೀಗಾಗಿ ಈ ಕಾರ್ಖಾನೆ ಆರಂಭಿಸಬೇಕು. ಕಾರ್ಖಾನೆ ಮೇಲಿರುವ ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ ಬ್ಯಾಂಕ್ ಹಾಗೂ ಎಸ್.ಬಿ.ಐ ಬ್ಯಾಂಕ್‌ನ ಬಡ್ಡಿ ಮನ್ನಾ ಮಾಡಿದರೆ ಬಿಡ್ಡುದಾರರು ಭಾಗವಹಿಸಿ ಲೀಸ್ ಪಡೆದುಕೊಳ್ಳುತ್ತಾರೆ ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ, ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಬ್ದುಲ್ ಮನ್ನಾನ್ ಶೇಠ್, ವಿಧಾನ ಪರಿಷತ್ ಮಾಜಿ ಸದಸ್ಯ ಅರವಿಂದ್ ಕುಮಾರ್ ಅರಳಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಶ್ರೀಮಂತರಾವ್ ಬಿರಾದಾರ, ರೈತ ಸಂಘದ ಗೌರವಾಧ್ಯಕ್ಷ ಸಿದ್ರಾಮಪ್ಪ ಆಣದೂರೆ, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ, ಬಿಎಸ್ಎಸ್‌ಕೆ ಕಾರ್ಮಿಕರಾದ ರಾಜಶೇಖರ ಹಂದ್ರಾಳೆ, ಅರ್ಜುನ್ ತಮಗಿಕರ್, ಗುರುಲಿಂಗಯ್ಯ ಹಾಲಾ, ಝರ್ನಾರೆಡ್ಡಿ, ರಾಜು ಪಾಟೀಲ್, ಮಲ್ಲಿಕಾರ್ಜುನ್ ಭಂಡಾರಿ, ಶಿವಕುಮಾರ ಚೆಳಕಾಪುರೆ, ಝುರನು ಕಾವಲೆ, ಜಾನ್ಸನ್ ಇತರರಿದ್ದರು.

ರಾಜಶೇಖರ ಪಾಟೀಲ, ಮಾಜಿ ಸಚಿವಬಿ.ಎಸ್.ಎಸ್.ಕೆ. ಕಾರ್ಖಾನೆಗೆ ಸಾಲ ನೀಡಿದ ಬ್ಯಾಂಕಿನವರನ್ನು ಕರೆಸಿ ಚರ್ಚಿಸಿ ಆದಷ್ಟು ಬೇಗ ಗುತ್ತಿಗೆ ಪ್ರಕ್ರಿಯೆ ಮಾಡುವ ಭರವಸೆ ಮುಖ್ಯಮಂತ್ರಿ ನೀಡಿದ್ದಾರೆ

# ಮತದಾರರ ಹಕ್ಕು ಕಸಿಯುವ ಎಸ್‌ಐಆರ್: ವಿರುದ್ಧ ಮತ್ತೊಂದು ಕ್ರಾಂತಿಗೆ ನಟ ಪ್ರಕಾಶ್ ರಾಜ್ ಕರೆ

**ರಾಯಚೂರು, ಸೆ. 26:** ಕೇಂದ್ರ ಸರ್ಕಾರದ ಆದೇಶದ ಮೇರೆಗೆ ದೇಶಾದ್ಯಂತ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯು ಪ್ರಜಾಪ್ರಭುತ್ವ ವಿರೋಧಿಯಾಗಿದೆ. ದೇಶದ ಅರ್ಹ ನಾಗರಿಕರ ಮತದಾನದ ಹಕ್ಕನ್ನು ಕಸಿಯುವ ಈ ಅಕ್ರಮ ನೀತಿಯ ವಿರುದ್ಧ ಶೀಘ್ರದಲ್ಲೇ ದೇಶದಲ್ಲಿ ಮತ್ತೊಂದು ದೊಡ್ಡ ಕ್ರಾಂತಿ ಜರುಗಲಿದೆ ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಎಚ್ಚರಿಕೆ ನೀಡಿದರು.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮತದಾರರ ಪಟ್ಟಿ ಅಕ್ರಮಗಳನ್ನು ಖಂಡಿಸಿ ಅವರು ಹಮ್ಮಿಕೊಂಡಿರುವ 10 ದಿನಗಳ ರಾಜ್ಯ ಪ್ರವಾಸದ ಅಂಗವಾಗಿ ರಾಯಚೂರಿಗೆ ಭೇಟಿ ನೀಡಿ, ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಮತ್ತು ಸಾರ್ವಜನಿಕರೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು.

ನಾವು ಈ ದೇಶದ ನಾಗರಿಕರೇ ಹೊರತು ಕಳ್ಳರಲ್ಲ. ಎಸ್‌ಐಆರ್ ಹೆಸರಿನಲ್ಲಿ ಸಾಮಾನ್ಯ ಮತ್ತು ದುರ್ಬಲ ವರ್ಗದ ಜನರ ಮತದಾನದ ಹಕ್ಕನ್ನು ಕಿತ್ತುಕೊಳ್ಳಲು ನಾವು ಬಿಡುವುದಿಲ್ಲ. ಈಗಾಗಲೇ ಪಶ್ಚಿಮ ಬಂಗಾಳದಲ್ಲಿ ಲಕ್ಷಾಂತರ ಜನರು ಈ ಪ್ರಕ್ರಿಯೆಯಿಂದಾಗಿ ಸಂಕಷ್ಟ ಅನುಭವಿಸಿದ್ದಾರೆ. ಅದೇ ಪರಿಸ್ಥಿತಿ ನಮ್ಮ ರಾಜ್ಯದ ಜನರಿಗೆ ಎದುರಾಗಲು ಬಿಡೆವು.



ನಮ್ಮ ಹಕ್ಕುಗಳಿಗಾಗಿ ನಾವು ಬೀದಿಗಿಳಿದು ಹೋರಾಡಲಿದ್ದೇವೆ ಮತ್ತು ಗೆಲ್ಲಲಿದ್ದೇವೆ ಎಂದು ಪ್ರಕಾಶ್ ರಾಜ್ ಗುಡುಗಿದರು.

ಸೆಪ್ಟೆಂಬರ್ 30ಕ್ಕೆ ಸಿಎಂ ಭೇಟಿ, ಅಕ್ಟೋಬರ್ 1ಕ್ಕೆ ದೆಹಲಿಯಲ್ಲಿ ಪ್ರತಿಭಟನೆ: ಎಸ್‌ಐಆರ್ ಕರಡು ಪಟ್ಟಿಯಲ್ಲಿ ಕೋಟ್ಯಂತರ ಮತದಾರರ ಹೆಸರುಗಳನ್ನು ವ್ಯವಸ್ಥಿತವಾಗಿ ಡಿಲೀಟ್ ಮಾಡಲಾಗಿರುವ ಆತಂಕಕಾರಿ ದತ್ತಾಂಶಗಳನ್ನು ಕಲೆಹಾಕಲಾಗುತ್ತಿದೆ.


"ಈ ಸಂಬಂಧ ಎಲ್ಲಾ ಜಿಲ್ಲೆಗಳಿಂದ ಸಂಗ್ರಹಿಸಿದ ದೋಷಪೂರಿತ ದಾಖಲೆಗಳೊಂದಿಗೆ ಸೆಪ್ಟೆಂಬರ್ 30ರಂದು ಕರ್ನಾಟಕ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ಅಧಿಕೃತ ದಾಖಲೆ ಬಿಡುಗಡೆ ಮಾಡಲಿದ್ದೇವೆ. ಆ ಬಳಿಕ ಅಕ್ಟೋಬರ್ 1ರಂದು ನವದೆಹಲಿಯಲ್ಲಿ ಬೃಹತ್ ಪತ್ರಿಕಾಗೋಷ್ಠಿ ಮತ್ತು ಪ್ರತಿಭಟನೆ ನಡೆಸುವ ಮೂಲಕ ಕೇಂದ್ರದ ದಮನಕಾರಿ ನೀತಿಯನ್ನು ರಾಷ್ಟ್ರಮಟ್ಟದಲ್ಲಿ ಬಯಲಿಗೆಳೆಯಲಾಗುವುದು," ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಮುಖ ಪ್ರಗತಿಪರ ಹೋರಾಟಗಾರರಾದ ಕೆ. ನೀಲಾ, ಮೀನಾಕ್ಷಿ ಬಾಲಿ, ಕೆ.ಎಲ್. ಅಶೋಕ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದು ಪ್ರಕಾಶ್ ರಾಜ್ ಅವರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

# ಕಲ್ಯಾಣ ಕರ್ನಾಟಕ ಶಿಕ್ಷಕರ ಸೇವೆ ರಕ್ಷಿಸಲು ಜಿಲ್ಲಾಧಿಕಾರಿಗೆ ಮನವಿ

**ಬೀದರ್, ಸೆ. 26 :** ಕಲ್ಯಾಣ ಕರ್ನಾಟಕ ವಿಭಾಗದಲ್ಲಿ 371(ಎ) ಮೀಸಲಾತಿ ಹಾಗೂ ಮೆರಿಟ್ ಆಧಾರದ ಮೇಲೆ ನೇಮಕಗೊಂಡು ಸುಮಾರು ಮೂರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಸೇವೆಯನ್ನು ಯಾವುದೇ ಕಾರಣಕ್ಕೂ ಮೊಟಕುಗೊಳಿಸದೆ ರಕ್ಷಿಸಬೇಕು ಎಂದು ಕನ್ನಡ ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಸುಭಾಷ ಕೆನಾಡೆ ಅವರು ಒತ್ತಾಯಿಸಿದರು.

ಈ ಕುರಿತು ಮುಖ್ಯಮಂತ್ರಿ ಅವರಿಗೆ ಜಿಲ್ಲಾಧಿಕಾರಿ ಮೂಲಕ ಮನವಿ ಸಲ್ಲಿಸಿದ ಅವರು, ಕಲ್ಯಾಣ ಕರ್ನಾಟಕ ಭಾಗದ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಹಿಂದಿನ ಸರ್ಕಾರವು 2023ರ ಫೆ.1ರಂದು ಹೊರಡಿಸಿದ ಸುತ್ತೋಲೆಯನ್ವಯ ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಸಲಾಗಿತ್ತು. ಅಧಿಕೃತ ನೇಮಕಾತಿ ಪ್ರಕ್ರಿಯೆಯ ಮೂಲಕ ಆಯ್ಕೆಯಾದ ಶಿಕ್ಷಕರು ಕಳೆದ ಮೂರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಅನೇಕರು ಪರಿವೀಕ್ಷಣಾ ಅವಧಿಯನ್ನೂ ಪೂರ್ಣಗೊಳಿಸಿದ್ದಾರೆ ಎಂದು ತಿಳಿಸಿದರು.



ಕಳೆದ ಸೆ.17ರಂದು ಹೈಕೋರ್ಟ್‌ನ ಕಲಬುರಗಿ ಪೀಠವು ಕಲ್ಯಾಣ ಕರ್ನಾಟಕ ವಿಭಾಗಕ್ಕೆ ಅನ್ವಯಿಸುವ ಮೇಲ್ಕಂಡ ಸುತ್ತೋಲೆಗೆ ಸಂಬಂಧಿಸಿದಂತೆ ನೀಡಿರುವ ಆದೇಶದ ಹಿನ್ನೆಲೆಯಲ್ಲಿ, ಈಗಾಗಲೇ ನೇಮಕಗೊಂಡು ಸೇವೆ ಸಲ್ಲಿಸುತ್ತಿರುವ ಶಿಕ್ಷಕರಲ್ಲಿ ಉದ್ಯೋಗದ ಕುರಿತು ಆತಂಕ ಮೂಡಿದೆ. ಸರ್ಕಾರದ ಅಧಿಕೃತ ಸುತ್ತೋಲೆ ಹಾಗೂ ನೇಮಕಾತಿ ಪ್ರಕ್ರಿಯೆ ಮೂಲಕ ಉದ್ಯೋಗ ಪಡೆದಿರುವ ಶಿಕ್ಷಕರು ತಮ್ಮ ವೇತನವನ್ನೇ ಅವಲಂಬಿಸಿ ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ ಸೇರಿದಂತೆ ಹಲವು ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದಾರೆ. ಹೀಗಾಗಿ ಅವರ ಸೇವಾ ಅನುಭವ ಹಾಗೂ ಕುಟುಂಬಗಳ ಭವಿಷ್ಯವನ್ನು ಪರಿಗಣಿಸಿ ಸರ್ಕಾರ ತಕ್ಷಣ ಸೂಕ್ತ ಕಾನೂನು ಕ್ರಮ, ಮೇಲ್ಮನವಿ ಸೇರಿದಂತೆ ಅಗತ್ಯ ಕ್ರಮ ಕೈಗೊಂಡು ಸೇವಾ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು.

371(ಎ)ರ ಸಾಂವಿಧಾನಿಕ ಆಶಯ ಹಾಗೂ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಈಗಾಗಲೇ ಸೇವೆಯಲ್ಲಿರುವ ಶಿಕ್ಷಕರ ಉದ್ಯೋಗ ಮುಂದುವರಿಸಲು ಕಾನೂನುಬದ್ಧ ಪರ್ಯಾಯ ವ್ಯವಸ್ಥೆಯನ್ನೂ ಸರ್ಕಾರ ಪರಿಶೀಲಿಸಬೇಕು ಎಂದು ಅವರು ಒತ್ತಾಯಿಸಿದರು.

# ಜೋಕುಮಾರಸ್ವಾಮಿ ಆಚರಣೆಗೆ ಗೌರವಧನ ನೀಡಲು ಒತ್ತಾಯಿಸಿ ಧರಣಿ



**ಕಲಬುರಗಿ, ಸೆ. 26:** ರಾಜ್ಯದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕ ಭಾಗದ ಬುಡಕಟ್ಟು ಸಮುದಾಯಗಳಿಂದ ತಲೆತಲಾಂತರದಿಂದಲೂ ಆಚರಿಸಿಕೊಂಡು ಬಂದಿರುವ ಜೋಕುಮಾರ ಸ್ವಾಮಿ ಉತ್ಸವ ಆಚರಣೆಗೆ ಸರ್ಕಾರದಿಂದ ಗೌರವಧನ ನೀಡಬೇಕು ಎಂದು ಒತ್ತಾಯಿಸಿ, ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಾಹಿತ್ಯ ಪರಿಷತ್ ನೇತೃತ್ವದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಬಳಿಕ ಪ್ರತಿಭಟನಕಾರರು ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿಪತ್ರ ಸಲ್ಲಿಸಿದರು.

ಈ ವೇಳೆ ಸಂಘಟನೆಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಟಿ.ಡಿ. ರಾಜ್ ಮಾತನಾಡಿ, ಬುಡಕಟ್ಟು ಸಮುದಾಯಗಳಾದ ಕೋಲಿ, ಕಬ್ಬಲಿಗ, ಬೆಸ್ತ, ಟೋಕರಿಕೋಲಿ, ವಾಲಿಕಾರ, ತಳವಾರ, ಜಮಾದಾರ, ನಾಯಿಕೋಡಿ, ನಾಟಿಕಾರ ಇತ್ಯಾದಿ ಹೆಸರುಗಳಿಂದ ಕರೆಯುವ ಜನರು ಪ್ರತಿವರ್ಷ ಗಜಾನನ ಉತ್ಸವದ ನಂತರ ಸಾಂಪ್ರದಾಯಿಕವಾಗಿ ಜೋಕುಮಾರ ಸ್ವಾಮಿ ಉತ್ಸವ ಆಚರಿಸುತ್ತಾರೆ ಎಂದು ತಿಳಿಸಿದರು.

ಮಣ್ಣಿನಿಂದ ತಯಾರಿಸಿದ ಜೋಕುಮಾರ ಸ್ವಾಮಿಯ ಮೂರ್ತಿಯನ್ನು ಮರದ ಬುಟ್ಟಿಯಲ್ಲಿ ಪ್ರತಿಷ್ಠಾಪಿಸುತ್ತಾರೆ. ಬುಡಕಟ್ಟು ಸಮುದಾಯಗಳ ಹೆಣ್ಣುಮಕ್ಕಳು ಬುಟ್ಟಿಗಳನ್ನು ತಲೆಯ ಮೇಲೆ ಹೊತ್ತು ಮನೆಮನೆಗೆ ತೆರಳಿ ಜೋಕುಮಾರ ಸ್ವಾಮಿಯ ಹಾಡುಗಳನ್ನು ಹಾಡಿ, ಪ್ರತಿಯಾಗಿ ಜನರಿಂದ ದವಸ-ಧಾನ್ಯಗಳನ್ನು ಸ್ವೀಕರಿಸುತ್ತಾರ. ಈ ಸಮುದಾಯಗಳ ಅನೇಕ ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿದ್ದು, ಶಿಕ್ಷಣ, ಉದ್ಯೋಗ, ಆರೋಗ್ಯ ಸೇರಿ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ಅರ್ಹರಿಗೆ ಜಾತಿ ಮತ್ತು ಸಿಂಧುತ್ವ ಪ್ರಮಾಣಪತ್ರಗಳನ್ನು ಒದಗಿಸಿ, ಸರ್ಕಾರಿ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಪ್ರತಿ ಗ್ರಾಮದಲ್ಲಿ ಜೋಕುಮಾರನ ಆಚರಣೆಗೆ ವಾರ್ಷಿಕ 51 ಸಾವಿರ ಗೌರವಧನ ನೀಡಬೇಕು. ಅಲ್ಲದೆ ಬುಡಕಟ್ಟು ಸಮುದಾಯದ ಕುಲಕಸುಬು, ಕಲೆ ಹಾಗೂ ಜೋಕುಮಾರ ಸ್ವಾಮಿ ಹಾಡುಗಳನ್ನು ಉಳಿಸಿ ಬೆಳೆಸುತ್ತಿರುವ ಹೆಣ್ಣುಮಕ್ಕಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಿಕ ಪ್ರೋತ್ಸಾಹ ಧನ ಮಂಜೂರು ಮಾಡಬೇಕು ಎಂದು ಆಗ್ರಹಿಸಲಾಗಿದೆ.

## ಒಂದೇ ಮಳೆಗೆ ಜಲಾವೃತವಾದ ಸೋಯಾಬೀನ್ ಬೆಳೆಯ ಹೊಲ: ನಷ್ಟದಿಂದ ರೈತ ಕಂಗಾಲು

**ಬೀದರ್, ಸೆ. 26:** ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯು ಭಾರ ಕುಸಿತದ ಪರಿಣಾಮ ಬೀದರ್ ಜಿಲ್ಲೆಯ ಗಡಿಕುಸನೂರ ಗ್ರಾಮದಲ್ಲಿ ಸುರಿದ ಮಳೆಯ ಆರ್ಭಟದ ಬಿಸಿ ತಟ್ಟಿದೆ. ಕಳೆದ ಎರಡು ದಿನಗಳ ಹಿಂದೆ ಸುರಿದ ಭಾರಿ ಮಳೆಯಿಂದ ಕೆಲವು ರೈತರ ಹೊಲಗಳಲ್ಲಿ ನೀರು ನಿಂತಿದ್ದು, ಉತ್ತಮವಾಗಿ ಬೆಳೆದು ಹಾನಿಯಾಗುತ್ತಿರುವುದನ್ನು ಕಂಡು ರೈತರು ಆತಂಕ ಹಾಗೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೊಲಗಳಲ್ಲಿ ನೀರು ನಿಂತಿರುವುದರಿಂದ ಸೋಯಾಬೀನ್ ಸಸ್ಯಗಳ ಬೇರುಗಳು ಕೊಳೆಯುವ ಹಾಗೂ ಒಣಗುವ ಭೀತಿ ಎದುರಾಗಿದೆ. ಬೆಳೆ ಹೆಚ್ಚು ದಿನ ನೀರಿನಲ್ಲಿ ಮುಳುಗಿದ್ದರೆ ಇಳುವರಿ ಮೇಲೆ ಪರಿಣಾಮ ಬೀರುವ



ನಿಂತಿದ್ದ ಸೋಯಾಬೀನ್ ಬೆಳೆ ಜಲಾವೃತಗೊಂಡು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿತ್ತನೆ ಮಾಡಿದ ಬಳಿಕ ಆಗಾಗ ಸುರಿದ ಮಳೆಯಿಂದ ಸೋಯಾಬೀನ್ ಬೆಳೆ ಉತ್ತಮವಾಗಿ ಬೆಳೆದು ನಿಂತಿತ್ತು. ಆದರೆ ಏಕಾಏಕಿ ಸುರಿದ ಒಂದೇ ಮಳೆಯಿಂದ ಹೊಲಗಳಲ್ಲಿ ನೀರು ನಿಂತಿದ್ದು, ಕಟಾವಿನ ಹಂತಕ್ಕೆ ಬಂದಿದ್ದ ಬೆಳೆಗೆ ಹಾನಿಯಾಗುವ ಆತಂಕ ಎದುರಾಗಿದೆ.

ಹೈನುಗಾರಿಕೆ ಹಾಗೂ ಕೃಷಿಯನ್ನೇ ನಂಬಿಕೊಂಡು ಜೀವನ ನಡೆಸುತ್ತಿರುವ ರೈತರಿಗೆ ಅತಿಯಾದ ಮಳೆ ಮತ್ತೊಂದು ಹೊಡೆತ ನೀಡಿದೆ. ಕಣ್ಣಮುಂದೆಯೇ ಬೆಳೆ ಆತಂಕ ರೈತರಲ್ಲಿ ಮೂಡಿದೆ. ಬಿತ್ತನೆಯಿಂದ ಹಿಡಿದು ಕಟಾವಿನ ಹಂತದವರೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿರುವ ರೈತರಿಗೆ ಇದೀಗ ಕೈಗೆ ಬಂದ ತುತ್ತು ಬಾಯಿಗೆ ಬಾರದ ಸ್ಥಿತಿ ನಿರ್ಮಾಣವಾಗಿದೆ. ಉತ್ತಮ ಇಳುವರಿ ನಿರೀಕ್ಷೆಯಲ್ಲಿದ್ದ ರೈತರು ಬೆಳೆಹಾನಿಯಾಗುತ್ತಿರುವುದನ್ನು ಕಂಡು ಕಣ್ಣೀರಾಗಿದ್ದಾರೆ.

ತಮ್ಮ ಸಂಕಷ್ಟವನ್ನು ಅಧಿಕಾರಿಗಳ ಗಮನಕ್ಕೆ ತರಲು ರೈತರು ಹೊಲಗಳಲ್ಲಿನ ಜಲಾವೃತಗೊಂಡ ಸೋಯಾಬೀನ್ ಬೆಳೆಗಳ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಅಳಲು ತೋಡಿಕೊಂಡಿದ್ದಾರೆ.

# ರೈತರ ಬೆಳೆ ಉಳಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು: ಗುರುಲಿಂಗನಗೌಡ ಒತ್ತಾಯ

**ಬಳ್ಳಾರಿ ಸೆ 26:** ಇಡೀ ರಾಜ್ಯದಲ್ಲಿ ಮತ್ತು ವಿಶೇಷವಾಗಿ ಕಲ್ಯಾಣ ಕರ್ನಾಟಕದಲ್ಲಿ ಮಳೆ ಕೊರತೆಯಿಂದ ರೈತರು ಸಂಕಷ್ಟ ಸ್ಥಿತಿ ಅನುಭವಿಸುತ್ತಿದ್ದಾರೆ. ಹವಾಮಾನ ಇಲಾಖೆ ಸೇರಿದಂತೆ ವೈಜ್ಞಾನಿಕ ಮಾಹಿತಿ ಜನವರಿಯಲ್ಲಿಯೇ ಎಲ್ ನಿನೋ ಭೀಕರತೆ ಕುರಿತು ಜಾಗೃತಿ ಮೂಡಿಸಿದ್ದರೂ ರಾಜ್ಯ ಸರ್ಕಾರ ಯಾವುದೇ ಮುನ್ನೆಚ್ಚರಿಕೆ ಕೈಗೊಂಡಿಲ್ಲ. ಮುಂಗಾರು ನಂಬಿ ಬೆಳೆ ಬೆಳೆದ ರೈತರಿಗೆ ಕನಿಷ್ಠ ಕೃಷಿ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಿ ರೈತರ ಬೆಳೆ ಉಳಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಭಾರತೀಯ ಜನತಾ ಪಾರ್ಟಿ ರಾಜ್ಯ ರೈತ ಮೋರ್ಚಾ ಘಟಕದ ಉಪಾಧ್ಯಕ್ಷರಾದ ಎಸ್. ಗುರುಲಿಂಗನ ಗೌಡ ಅವರು ಸರ್ಕಾರಕ್ಕೆ ಆಗ್ರಹಪಡಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿಗೆ ನೇರವಾಗಿ ಪತ್ರ ಬರೆದು ಮನವಿ ಮಾಡಿರುವ ಅವರು, ಕೃಷಿ ಪಂಪ್‌ಸೆಟ್‌ಗಳಿಗೆ ಕನಿಷ್ಠ 7 ಗಂಟೆಗಳ ಗುಣಮಟ್ಟದ ಮತ್ತು ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು. ಕಡಿಮೆ ವೋಲ್ಟೇಜ್ ಹಾಗೂ ಪದೇಪದೇ ವಿದ್ಯುತ್ ವ್ಯತ್ಯಯವಾಗು ತ್ತಿರುವ ಸಮಸ್ಯೆಯನ್ನು ತಕ್ಷಣ ಬಗೆಹರಿಸಬೇಕು. ಮಳೆ ಕೊರತೆ ಹಾಗೂ ಬರಪೀಡಿತ ಪ್ರದೇಶಗಳಿಗೆ ಕೃಷಿ ವಿದ್ಯುತ್



ಪೂರೈಕೆಯಲ್ಲಿ ವಿಶೇಷ ಆದ್ಯತೆ ನೀಡಬೇಕು. ವಿದ್ಯುತ್ ಕೊರತೆಯ ಕಾರಣವನ್ನು ರೈತರ ಮೇಲೆ ಹೊರಿಸದೆ, ಸರ್ಕಾರ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಕಲ್ಯಾಣ ಕರ್ನಾಟಕ, ವಿಶೇಷವಾಗಿ ಬಳ್ಳಾರಿ ಸೇರಿದಂತೆ ಬರಪೀಡಿತ ಪ್ರದೇಶಗಳಲ್ಲಿ ರೈತರ ಬೆಳೆ ರಕ್ಷಣೆಗೆ ವಿದ್ಯುತ್ ಮತ್ತು ನೀರಿನ ಪೂರೈಕೆಗೆ ವಿಶೇಷ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

"ರೈತರು ಈ ಜಗತ್ತಿನ ಅನ್ನದಾತರು. ಅವರು ಜಾಗತಿಕ ಮಟ್ಟದ ಪ್ರತಿನಿಧಿಗಳು ಎಂದು ಸ್ವತಃ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಸಿಎಂ ಅವರ ಈ ಅಭಿಮಾನ ಹೇಳಿಕೆಗಳಿಗೆ ಸೀಮಿತವಾಗಬಾರದು. ರೈತರು ಬೆಳೆ ಉಳಿದರೆ ಮಾತ್ರ ಕೃಷಿ ಉಳಿಯುತ್ತದೆ. ರಾಜ್ಯ ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು, ವಿಶೇಷವಾಗಿ ಕಲ್ಯಾಣ ಕರ್ನಾಟಕದ ರೈತರ ಸಂಕಷ್ಟವನ್ನು ಗಮನದಲ್ಲಿಟ್ಟುಕೊಂಡು ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು. ಇಲ್ಲವಾದರೆ ರೈತರ ಪರವಾಗಿ ಬಿಜೆಪಿ ರೈತ ಮೋರ್ಚಾ ವತಿಯಿಂದ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಸ್. ಗುರುಲಿಂಗನ ಗೌಡ ಅವರು ಎಚ್ಚರಿಸಿದ್ದಾರೆ.

ಮಳೆ ಕೈಕೊಟ್ಟಿರುವ ಸಂದರ್ಭದಲ್ಲಿ ರೈತರು ತಮ್ಮ ಬೆಳೆಗಳನ್ನು ಉಳಿಸಿಕೊಳ್ಳಲು ಪಂಪ್‌ಸೆಟ್‌ಗಳ ಮೊರೆ ಹೋಗುತ್ತಿದ್ದಾರೆ. ಆದರೆ ಪಂಪ್‌ಸೆಟ್‌ಗೆ ಅಗತ್ಯ ಸಮಯದಲ್ಲಿ ವಿದ್ಯುತ್ ಸಿಗದಿದ್ದರೆ ರೈತರು ಬೆಳೆಗಳನ್ನು ಹೇಗೆ ಉಳಿಸಿಕೊಳ್ಳಬೇಕು ಎನ್ನುವ ದುಗುಡ, ಆತಂಕ ಎದುರಾಗಿದೆ. ವಿದ್ಯುತ್ ಬೇಡಿಕೆ ಹೆಚ್ಚಿರುವುದು ಸರ್ಕಾರದ ಗಮನದಲ್ಲಿದೆ. ಆದರೆ ವಿದ್ಯುತ್ ವ್ಯವಸ್ಥೆಯ ಮೇಲಿನ ಒತ್ತಡದ ಪರಿಣಾಮವನ್ನು ರೈತರ ಮೇಲೆ ಹೊರಿಸುವುದು ಸರಿಯಲ್ಲ. ವಿಶೇಷವಾಗಿ ಕಲ್ಯಾಣ ಕರ್ನಾಟಕದ ಬರಪೀಡಿತ ಪ್ರದೇಶಗಳಿಗೆ ಕೃಷಿ ವಿದ್ಯುತ್ ಪೂರೈಕೆಯಲ್ಲಿ ಸರ್ಕಾರ ಹೆಚ್ಚಿನ ಆದ್ಯತೆ ನೀಡಬೇಕು.

ಕಲ್ಯಾಣ ಕರ್ನಾಟಕದ ಹಲವು ಭಾಗಗಳ ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ಹೆಚ್ಚಿನ ಅವಧಿಯ ವಿದ್ಯುತ್ ಪೂರೈಕೆ ಮಾಡಬೇಕು. ರೈತರ ಬೆಳೆಗಳನ್ನು ಉಳಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು ಎಂದು ಅವರು ಆಗ್ರಹಿಸಿದ್ದಾರೆ.

# ಕಲಬುರಗಿ ಕ್ರೀಡಾಹಬ್ಬ: ಮೊದಲ ದಿನ ಚೆಸ್, ಕ್ರಿಕೆಟ್ ಕಲರವ

**ಕಲಬುರಗಿ, ಸೆ. 26:** ಕ್ರೀಡಾ ಸಂಸ್ಕೃತಿ ಪೋಷಣೆ, ಸ್ಥಳೀಯ ಪ್ರತಿಭೆಗಳ ಉತ್ತೇಜಿಸುವ ಉದ್ದೇಶದೊಂದಿಗೆ ಹಮ್ಮಿಕೊಂಡಿರುವ 'ಕಲಬುರಗಿ ಕ್ರೀಡಾ ಹಬ್ಬಕ್ಕೆ ನಗರದ ಚಂದ್ರಶೇಖರ ಪಾಟೀಲ್ ಜಿಲ್ಲಾ ಕ್ರೀಡಾಂಗಣದಲ್ಲಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ ಅವರು ವಿಧ್ಯುಕ್ತವಾಗಿ ಚಾಲನೆ ನೀಡಿದರು.






ಮೊದಲ ದಿನ ರಾಜಾಪುರದ ಸರ್ಕಾರ ಪದವಿ ಕಾಲೇಜು ಆವರಣದಲ್ಲಿ ಕ್ರಿಕೆಟ್ ಹಾಗೂ ಎಂಎಸ್‌ಐ ಪದವಿ ಪೂರ್ವ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಚೆಸ್ ಪಂದ್ಯಗಳ ಕಲರವ ಜೋರಾಗಿತ್ತು. ಅಂತರ ಕ್ಲಬ್‌ಗಳ ನಡುವಣ 20 ಓವರ್‌ಗಳ ಮೊದಲ ಕ್ರಿಕೆಟ್ ಪಂದ್ಯದಲ್ಲಿ ಕರ್ನಾಟಕ ಕ್ರಿಕೆಟ್ ಕ್ಲಬ್ ತಂಡವು 6 ವಿಕೆಟ್‌ಗಳಿಂದ ಸಿಸಿಆರ್ ಗುಲಬರ್ಗಾ ತಂಡವನ್ನು ಮಣಿಸಿತು. ದಿನದ ಇನ್ನೊಂದು ಪಂದ್ಯದಲ್ಲಿ ಎನ್.ವಿ ಜಿಮ್ಖಾನಾ ತಂಡವು 99 ರನ್‌ಗಳಿಂದ ಕಾಸ್ಮೋಸ್ ಕ್ರಿಕೆಟ್ ಕ್ಲಬ್ ತಂಡವನ್ನು ಮಣಿಸಿತು.

ಮಹಿಳಾ ವಿಭಾಗದ ಚೆಸ್‌ನಲ್ಲಿ ಮೊದಲ ದಿನ ಅಭಿರುಚಿ ಪಾರಮ್ಯ ಮೆರೆದರು. ಅಂತರರಾಷ್ಟ್ರೀಯ ಫಿಡೆ ರ್‍ಯಾಂಕಿಂಗ್‌ನಲ್ಲಿ 1,456ನೇ ಸ್ಥಾನದಲ್ಲಿರುವ ಅಭಿರುಚಿ ಆರು ಸುತ್ತು ಗಳಲ್ಲಿ 5 ಅಂಕದೊಂದಿಗೆ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಸಿದ್ಧಿಕ್ಷಾ ಜಿಂದೆ, ಸ್ಪಂದನಾ, ಸಾಯಿ ಸಚ್ಚರಿತಾ, ಅನುಕ್ಷಾ ಕುಲಕರ್ಣಿ ತಲಾ 4 ಅಂಕದೊಂದಿಗೆ 2ನೇ ಸ್ಥಾನದಲ್ಲಿದ್ದಾರೆ.

ಶೀರಿನ್ ಖಾನಮ್, ಮಧು ಹೊಸೂರ, ರಶ್ಮಿ, ಸುಮಾನ್, ಸೃಜನಾ, ಕೀರ್ತನಾ ಜಿಂದೆ, ಎಚ್.ಸುಹಾ ಅಂಜುಮ್ ತಲಾ 3 ಅಂಕಗಳೊಂದಿಗೆ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಫಿಡೆ ಅಂತರರಾಷ್ಟ್ರೀಯ ರ್‍ಯಾಂಕಿಂಗ್ ಹೊಂದಿರುವ ಏಳು ಸ್ಪರ್ಧಿಗಳು ಕಣದಲ್ಲಿದ್ದಾರೆ. ಮೊದಲ ದಿನ ಆರು ಸುತ್ತುಗಳ ಅಂತ್ಯಕ್ಕೆ ಬರುಣ್ ಹೆಬ್ಬೆ 5.5 ಅಂಕದೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಅನಿಶ್ ಮೋರೆ, ಆರುಷ್ ಬಿರಾದಾರ, ಪ್ರೀತಂ ಆರ್. ಅವರು ತಲಾ ಐದು ಅಂಕ ಗಳಿಸಿದ್ದಾರೆ. ವಿನೀತ್ ವಿ.ಸಿ., ಅಕ್ಷಿತ್ ಎಸ್. ತಲಾ 4.5 ಅಂಕ ಗಳಿಸಿದ್ದಾರೆ.

ಬೆಂಗಳೂರಿನ ಸ್ಪೊಂಜೋ ಸಂಸ್ಥೆ ಮತ್ತು ಸ್ಥಳೀಯ ಕ್ರೀಡಾ ಸಂಘಗಳ ಸಹಯೋಗದಲ್ಲಿ ಕಲಬುರಗಿ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಕಲಬುರಗಿ ಕ್ರೀಡಾಹಬ್ಬಕ್ಕೆ ಜಿಲ್ಲಾಧಿಕಾರಿ ಇಕ್ರಂ ಶರೀಫ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಜಿಲ್ಲೆಯ ಆರ್ಥಿಕ ಬೆಳವಣಿಗೆ, ವಿವಿಧ ವಲಯಗಳಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಹೆಚ್ಚಿಸುವುದು, ಕ್ರೀಡೆಗೆ ಹೆಚ್ಚಿನ ಒತ್ತು ನೀಡುವುದು ಕಲಬುರಗಿ ನೆಕ್ಸ್ಟ್ ಫೌಂಡೇಷನ್ ಉದ್ದೇಶ. ಹೀಗಾಗಿ ಫೌಂಡೇಷನ್‌ನಿಂದ ಈ ಕ್ರೀಡಾಹಬ್ಬ ಆಯೋಜಿಸಲಾಗಿದೆ. ಈ ಚಟುವಟಿಕೆ ದೊಡ್ಡಮಟ್ಟದಲ್ಲಿ ಬೆಳೆಯಬೇಕು. ಸ್ಥಳೀಯ ಪ್ರತಿಭೆಗಳಿಗೆ ಸಾಮರ್ಥ್ಯ ಪ್ರಚುರಪಡಿಸಲು ವೇದಿಕೆಯಾಗಬೇಕು. ಆ ಮೂಲಕ ಜಿಲ್ಲೆಯಿಂದ ರಾಜ್ಯ, ರಾಷ್ಟ್ರಹಾಗೂ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಯಲು ಬುನಾದಿ, ಚಿಮ್ಮುಹಲಗೆಯಾಗಬೇಕು ಎಂದರು.

ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಮಾತನಾಡಿ, ಜಿಲ್ಲೆ ಹಾಗೂ ಸುತ್ತಲಿನ ಪ್ರದೇಶದ ಯುವಕರಲ್ಲಿ ಬಹಳ ಪ್ರತಿಭೆ, ಶಕ್ತಿ, ಕೌಶಲವಿದೆ. ಆದರೆ, ಪ್ರತಿಭೆ ಗುರುತಿಸುವಿಕೆ, ಸಾಮರ್ಥ್ಯ ವೃದ್ಧಿಗೆ ಮಾರ್ಗದರ್ಶನ ಹಾಗೂ ಪ್ರತಿಭೆ ಪ್ರಚುರಪಡಿಸಲು ವೇದಿಕೆಗಳ ಕೊರತೆಯಿದೆ. ಹೀಗಾಗಿ ಕಲಬುರಗಿ ಕ್ರೀಡಾಹಬ್ಬವು ಈ ಭಾಗದ ಕ್ರೀಡಾಪಟುಗಳಲ್ಲಿ ಇರುವ ಅತ್ಯುತ್ತಮ ಕ್ರೀಡಾ ಸಾಮರ್ಥ್ಯ ಹೊರತರುವ ವೇದಿಕೆಯಾಗಲಿ. ಇಲ್ಲಿಂದ ರಾಜ್ಯ, ರಾಷ್ಟ್ರ, ಅಂತರರಾಷ್ಟ್ರಮಟ್ಟಕ್ಕೆ ಬೆಳೆಯಲಿ ಎಂದು ಆಶಿಸಿದರು.

## ಏಕ್ ಪೇಡ್ ಮಾ ಕೆ ನಾಮ್-ಒನ್ ಕೆಡೆಟ್ ಒನ್ ಟ್ರೀ ಅಭಿಯಾನಕ್ಕೆ ಕರೆ

# ಪ್ರತಿಯೊಬ್ಬರೂ ಒಂದು ಗಿಡ ನೆಟ್ಟು ಪೋಷಿಸಿ: ಕರ್ನಲ್ ವಂಶಿ

**ವಿಜಯಪುರ, ಸೆ.26** –ಎನ್‌ಸಿಸಿ ಕೆಡೆಟ್ ಸೇರಿದಂತೆ ಪ್ರತಿಯೊಬ್ಬರು ಸೂಕ್ತ ಸ್ಥಳದಲ್ಲಿ ಕನಿಷ್ಠ ಒಂದು ಗಿಡ ನೆಟ್ಟು, ಅದನ್ನು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ಕೊಡುಗೆ ನೀಡಬೇಕು ಎಂದು 36 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಕರ್ನಲ್ ಬಿ.ಕೆ.ಕೆ. ವಂಶಿ ಕರೆ ನೀಡಿದರು.

ಒನ್ ಕೆಡೆಟ್ ಒನ್ ಟ್ರೀ' ಅಭಿಯಾನವು ಪರಿಸರ ಜಾಗೃತಿ ಮೂಡಿಸುವುದರ ಜೊತೆಗೆ ಗಿಡ ನೆಟ್ಟು ಪೋಷಿಸುವ ಜವಾಬ್ದಾರಿಯನ್ನು ಕೆಡೆಟ್‌ಗಳಲ್ಲಿ ಬೆಳೆಸುವ ಉದ್ದೇಶ ಹೊಂದಿದೆ.

ಎನ್‌ಸಿಸಿ ಮೂಲಕ ಶಿಸ್ತು, ನಾಯಕತ್ವ, ಸಾಮಾಜಿಕ ಹೊಣೆಗಾರಿಕೆ



ಹಾಗೂ ಪರಿಸರ ಜಾಗೃತಿಯನ್ನು ಬೆಳೆಸಲಾಗುತ್ತಿದ್ದು, ವಿವಿಧ ತರಬೇತಿ, ಸಮುದಾಯ ಸೇವೆ ಮತ್ತು ಸಾಮಾಜಿಕ ಜಾಗೃತಿ ಚಟುವಟಿಕೆಗಳಲ್ಲೂ ಕೆಡೆಟ್‌ಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರ್ನಲ್ ವಂಶಿ ತಿಳಿಸಿದರು.

ನಂತರ ಗಣ್ಯರು ಹಾಗೂ ಎನ್‌ಸಿಸಿ ಅಧಿಕಾರಿಗಳು ಮತ್ತು ಕೆಡೆಟ್‌ಗಳು ಕಾಲೇಜು ಆವರಣದಲ್ಲಿ ಸಸಿಗಳನ್ನು ನೆಟ್ಟು ನೀರುಣಿಸಿದರು. ಗಿಡ ನೆಡುವುದು ಕೇವಲ ಚಟುವಟಿಕೆಯಾಗಿರದೆ, ಭವಿಷ್ಯದ ಪೀಳಿಗೆಗೆ ಸಲ್ಲಿಸುವ ಜವಾಬ್ದಾರಿಯಾಗಿದೆ ಎಂಬ ಸಂದೇಶವನ್ನು ಸಾರಿತು.

# ಐದು ಗ್ಯಾರಂಟಿಗಳೇ ಕಾಂಗ್ರೆಸ್ ಸರ್ಕಾರ ರೇಟ್‌ಕಾರ್ಡ್

**ಮಂಡ್ಯ, ಸೆ.26:** ಐದು ಗ್ಯಾರಂಟಿಗಳೇ ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿಯ ರೇಟ್ ಕಾರ್ಡ್. ಎಲ್ಲರಿಗೂ ಸಮಾನವಾಗಿ ಯೋಜನೆಗಳನ್ನು ಹಂಚಿಕೆ ಮಾಡಿ, ಸಾರ್ವಜನಿಕರನ್ನು ಗೌರವಿಸುವ ಏಕೈಕ ಸರ್ಕಾರ ನಮ್ಮದು. ಬೇರೆಯವರ ಬಗ್ಗೆ ಟೀಕೆ, ಚರ್ಚೆಗಳ ಬಗ್ಗೆ ಗಮನಹರಿಸುವುದಕ್ಕಿಂತ ನಮ್ಮ ಕೆಲಸದ ಬಗ್ಗೆ ದೃಷ್ಟಿ ನೆಟ್ಟರೆ ಸಾರ್ವಜನಿಕರ ಹತ್ತು ಹಲವು ಕೆಲಸಗಳು ಸುಗಮವಾಗಿ ಆಗುತ್ತವೆ ಎಂಬುದು ನನ್ನ ಬಲವಾದ ನಂಬಿಕೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಬಸರಾಳು ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲಾ ಆವರಣದಲ್ಲಿ ಶನಿವಾರ ನಡೆದ 'ಪ್ರಜಾಸೇವಾ ಆಂದೋಲನ' ಸಭೆಯಲ್ಲಿ ಮಾತನಾಡಿ, ಬಲಾಢ್ಯ ರಾಜಕಾರಣಿಗಳಿದ್ದರೂ ಜಿಲ್ಲೆ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿಯಾಗಿಲ್ಲ. ಹೀಗಾಗಿ ಜನಸೇವೆ ಮಾಡುವ ಅವಕಾಶ ನಮಗೆ ಸಿಗಲಿ, ನಿಮ್ಮ ಮೂಲಕ ಜಿಲ್ಲೆ ಒಂದಷ್ಟು ಅಭಿವೃದ್ಧಿಯಾಗಲಿ ಎಂದು ಇದೇ ಬಸರಾಳು ಗ್ರಾಮದ ಹಿರಿಯರೊಬ್ಬರು ಹಾರೈಸಿದ್ದನ್ನು ಸಚಿವರು ಇದೇ ವೇಳೆ ಸ್ಮರಿಸಿದರು. ಅಲ್ಲದೆ, ಜಿಲ್ಲೆಗೆ ಸರ್ಮಪಕ ಸೇವೆ ಸಲ್ಲಿಸಿದ ಸಾರ್ಥಕ ಅನುಭವ ನನಗಿದೆ. ಅದರಲ್ಲೂ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಸಾರ್ಥಕತೆ ಇನ್ನಷ್ಟು ಹೆಚ್ಚಾಗಿದೆ ಎಂದು ಅಭಿಮಾನದ ಮಾತುಗಳನ್ನಾಡಿದರು.

ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎನ್ನುವ ಉದ್ದೇಶದಿಂದಲೇ ಕಾಂಗ್ರೆಸ್ ಸರ್ಕಾರ ಈ ಹಿಂದೆ ನನ್ನನ್ನು ಕೃಷಿ ಸಚಿವನನ್ನಾಗಿ ಮಾಡಿತ್ತು ಎನಿಸುತ್ತಿದೆ. ಮಂಡ್ಯದ ಜೀವನಾಡಿ ಮೈಶುಗರ್ ಫ್ಯಾಕ್ಟರಿಗೆ ಇನ್ನಾö್ಯವತ್ತೂ ಬಾಗಿಲು ಹಾಕುವ ಪರಿಸ್ಥಿತಿ ಬರುವುದಿಲ್ಲ. ಸರ್ಕಾರದ ಬೆಂಬಲದೊಂದಿಗೆ ಮೈಶುಗರ್ ಫ್ಯಾಕ್ಟರಿ ಯಶಸ್ವಿಯಾಗಿ ಮುನ್ನಡೆಯುವ ಶಕ್ತಿ ಹೊಂದಿದೆ. ಇದರ ಜೊತೆಗೆ ಜಿಲ್ಲಾ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕು ಎನ್ನುವ ನನ್ನ ಗುರಿಯನ್ನು ಆದಷ್ಟು ಬೇಗ ತಲುಪಲಾಗುವುದು ಎಂದು ಭರವಸೆ ನೀಡಿದರು.

ಮಂಡ್ಯ ಜಿಲ್ಲೆಗೆ ಸೇವೆ ಸಲ್ಲಿಸಲು ಅವಕಾಶ ದೊರೆತಿರುವುದನ್ನು ಸ್ಮರಿಸಿದ' ಸಚಿವರು, ವೈದ್ಯಕೀಯ ಕಾಲೇಜು, ಕೆಎಸ್‌ಆರ್‌ಟಿಸಿ ವಿಭಾಗ ಸೇರಿದಂತೆ ಜಿಲ್ಲೆಯ ವಿವಿಧ ಅಭಿವೃದ್ಧಿ ಕಾರ್ಯಗಳ ಅನುಷ್ಠಾನದ ಬಗ್ಗೆ ಪ್ರಸ್ತಾಪಿಸಿದರು. ಸರ್ಕಾರದ ಮುಂದೆ ಅನೇಕ ಸವಾಲುಗಳಿದ್ದು, ಅಷ್ಟೇ ಪ್ರಮಾಣದಲ್ಲಿ ಭವಿಷ್ಯದ ಆಲೋಚನೆಗಳೂ ಇವೆ. ಶೀಘ್ರದಲ್ಲೇ ನಿವೇಶನರಹಿತರಿಗೆ ನಿವೇಶನ ಹಂಚಲಾಗುವುದು. ಇಡೀ ಸರ್ಕಾರವೇ ಸಾರ್ವಜನಿಕರ ಮನೆ ಬಾಗಿಲಿಗೆ ಹೋಗಬೇಕು ಎಂಬ ಸದುದ್ದೇಶದಿಂದ 'ಪ್ರಜಾಸೇವಾ' ಆಂದೋಲನವನ್ನು ಪ್ರಾರಂಭಿಸಲಾಗಿದೆ. ಪ್ರತಿಯೊಬ್ಬರೂ ಈ ಸೇವೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು.



### ಸಾರ್ವಜನಿಕರ ಅಹವಾಲು ಸ್ವೀಕಾರ

ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ದೂರು ಹಾಗೂ ಮನವಿಗಳ ಮಹಾಪೂರವೇ ಹರಿದುಬಂತು. ಪೋಡಿ ದುರಸ್ತಿ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಬಸ್ ನಿಲುಗಡೆ ಸಮಸ್ಯೆ, ಹರಗನಹಳ್ಳಿ ಗ್ರಾಮದ ಸುತ್ತಮುತ್ತ ಸೂಕ್ತ ಬಸ್ ಸೌಲಭ್ಯವಿಲ್ಲದಿರುವುದು, ಪಡಿತರ ಚೀಟಿ ಸಮಸ್ಯೆ, ಸಹಕಾರ ಸಂಘಕ್ಕೆ ವಿದ್ಯುತ್ ಸಂಪರ್ಕ ಪಡೆಯಲು ಎರಡು ಲಕ್ಷ ರೂ. ಬಿಲ್ ಕೇಳುತ್ತಿರುವ ದೂರು, ಉದ್ಯೋಗ ಕೋರಿಕೆ, ಕಾಲೇಜು ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಪ್ರವೇಶ, ವಸತಿ ಮತ್ತು ನಿವೇಶನ ಸಮಸ್ಯೆ, ಮನೆ ಕಟ್ಟಿದ್ದರೂ ಹಕ್ಕುಪತ್ರ ನೀಡಲು ಪಂಚಾಯಿತಿ ನಿರಾಕರಿಸುತ್ತಿರುವುದು, ಚರಂಡಿ ಸಮಸ್ಯೆ, ವೃದ್ಧಾಪ್ಯ ವೇತನ ಮಂಜೂರಾತಿ, ಶಿವಪುರದಿಂದ ಬಸರಾಳಿಗೆ ಹೆಚ್ಚುವರಿ ಬಸ್ ಸೇವೆ, ಇ-ಸ್ವತ್ತು, ಕೂಲಿಕಾರ್ಮಿಕರ ಬಾಕಿ ಹಣ ಪಾವತಿ ಸೇರಿದಂತೆ ಹತ್ತಾರು ಸಮಸ್ಯೆಗಳ ಕುರಿತು ಜನರು ಮನವಿ ಸಲ್ಲಿಸಿದರು.ಸುಮಾರು ಎರಡು ಗಂಟೆಗಳಿಗೂ ಅಧಿಕ ಕಾಲ ಸಾರ್ವಜನಿಕರ ಅಹವಾಲು ಆಲಿಸಿದ ಸಚಿವರು, ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಿದರು. ಉಳಿದ ಮನವಿಗಳಿಗೆ ಸ್ಪಂದಿಸಿ ಸಮಸ್ಯೆ ಬಗೆಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

# ಬಿಡದಿ ಟೌನ್‌ಶಿಪ್ ವಿರೋಧಿ ಹೋರಾಟ: ದಯಾಮರಣಕ್ಕೆ ಅನುಮತಿ ಕೋರಿ ರಾಷ್ಟ್ರಪತಿ, ರಾಜ್ಯಪಾಲರಿಗೆ ಮನವಿ

**ರಾಮನಗರ, ಸೆ.26:** ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿ ಟೌನ್‌ಶಿಪ್ ಯೋಜನೆಗೆ ಕೃಷಿಭೂಮಿ ಸ್ವಾಧೀನ ಪಡಿಸಿಕೊಳ್ಳುವ ವಿಚಾರ ಇದೀಗ ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಂಡಿದ್ದು, ಸರ್ಕಾರ ಯೋಜನೆಯನ್ನು ಮುಂದುವರಿಸುವ ನಿಲುವು ವ್ಯಕ್ತಪಡಿಸುತ್ತಿರುವ ಬೆನ್ನಲ್ಲೇ, ಭೂಸ್ವಾಧೀನ ವಿರೋಧಿಸಿ ಹೋರಾಟ ನಡೆಸುತ್ತಿರುವ ರೈತರು ರಾಜ್ಯಪಾಲರು ಹಾಗೂ ರಾಷ್ಟ್ರಪತಿಗೆ ಸಾಮೂಹಿಕ ಮನವಿ ಸಲ್ಲಿಸಿದ್ದಾರೆ.



ತಮ್ಮ ಕೃಷಿಭೂಮಿಯನ್ನು ಕಳೆದುಕೊಂಡು ಜೀವನೋಪಾಯವಿಲ್ಲದ ಸ್ಥಿತಿಗೆ ತಳ್ಳುವುದಕ್ಕಿಂತ, ಭೂಸ್ವಾಧೀನ ಪ್ರಕ್ರಿಯೆ ಮುಂದುವರಿದರೆ 'ದಯಾಮರಣಕ್ಕೆ' ಅನುಮತಿ ನೀಡುವಂತೆ ಮನವಿಯಲ್ಲಿ ಕೋರಿರುವುದು ವಿವಾದದ ಗಂಭೀರತೆಯನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ.

ಬಿಡದಿ ಹೋಬಳಿಯ ರೈತರು ಪ್ರಸ್ತಾವಿತ ಬಿಡದಿ ಸ್ಮಾರ್ಟ್ ಸಿಟಿ/ ಟೌನ್‌ಶಿಪ್ ಯೋಜನೆಗೆ ಫಲವತ್ತಾದ ಕೃಷಿ ಜಮೀನುಗಳನ್ನು ಬಳಸುವುದನ್ನು ವಿರೋಧಿಸುತ್ತಿದ್ದಾರೆ. ಹಲವು ಹಂತಗಳಲ್ಲಿ ಪ್ರತಿಭಟನೆ ನಡೆಸಿರುವ ರೈತರು, ಸರ್ಕಾರ ತಮ್ಮ ಬೇಡಿಕೆಗಳಿಗೆ ಸ್ಪಂದಿಸದ ಹಿನ್ನೆಲೆಯಲ್ಲಿ ಇದೀಗ ಉಪವಾಸ ಸತ್ಯಾಗ್ರಹದ ಹಾದಿಯನ್ನೂ ಹಿಡಿದಿದ್ದಾರೆ. ಇದರ ನಡುವೆಯೇ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಸಹಿ ಸಹಿತ ಮನವಿ ಸಲ್ಲಿಸುವ ಮೂಲಕ ತಮ್ಮ ಹೋರಾಟವನ್ನು ರಾಜ್ಯದ ಆಡಳಿತಾತ್ಮಕ ವಲಯದಾಚೆಗೆ ಕೊಂಡೊಯ್ದಿದ್ದಾರೆ.

ರೈತರ ಮನವಿಯ ಪ್ರಕಾರ, ಬಿಡದಿ ಸುತ್ತಮುತ್ತಲಿನ ಹಲವು ಕುಟುಂಬಗಳು ತಲತಲಾಂತರ ಗಳಿಂದ ಕೃಷಿಯನ್ನೇ ಅವಲಂಬಿಸಿವೆ. ಬಹುಬೆಳೆ ಬೆಳೆಯುವ ನೀರಾವರಿ ಜಮೀನುಗಳು ಕುಟುಂಬಗಳ ಆಹಾರ, ಮಕ್ಕಳ ಶಿಕ್ಷಣ, ಜಾನುವಾರುಗಳ ನಿರ್ವಹಣೆ ಸೇರಿದಂತೆ ದಿನನಿತ್ಯದ ಬದುಕಿನ ಪ್ರಮುಖ ಆಧಾರವಾಗಿವೆ.

ಕೃಷಿಭೂಮಿ ಕಳೆದುಕೊಂಡರೆ ಪರ್ಯಾಯ ಉದ್ಯೋಗ ಅಥವಾ ಆದಾಯದ ಮೂಲವಿಲ್ಲ ಎಂಬುದು ರೈತರ ಪ್ರಮುಖ ವಾದವಾಗಿದೆ. ಯೋಜನೆಯ ಹೆಸರಿನಲ್ಲಿ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನ ಪಡಿಸಿಕೊಳ್ಳುವುದು ತಮ್ಮ ಬದುಕಿನ ಹಕ್ಕಿನ ಮೇಲಿನ ಪರಿಣಾಮ ಎಂದು ರೈತರು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಕೃಷಿ ಜಮೀನು ಕಳೆದುಕೊಂಡ ನಂತರ ಪರಿಹಾರ ಅಥವಾ ಪರ್ಯಾಯ ವ್ಯವಸ್ಥೆ ಮಾತ್ರ ಸಾಕಾಗುವುದಿಲ್ಲ; ತಮ್ಮ ಸಾಂಪ್ರದಾಯಿಕ ಜೀವನೋಪಾಯವೇ ನಾಶವಾಗುತ್ತದೆ ಎಂಬುದು ಹೋರಾಟಗಾರರ ಆಕ್ಷೇಪವಾಗಿದೆ.

ಯಾವುದೇ ಕಾರಣಕ್ಕೂ ತಮ್ಮ ಜೀವನಾಧಾರವಾಗಿರುವ ಕೃಷಿ ಭೂಮಿಯನ್ನು ಟೌನ್‌ಶಿಪ್ ಯೋಜನೆಗೆ ಬಿಟ್ಟುಕೊಡಲು ಸಿದ್ಧರಿಲ್ಲ ಎಂದು ರೈತರು ಸ್ಪಷ್ಟಪಡಿಸಿದ್ದಾರೆ.

ಪ್ರಸ್ತಾವಿತ ಭೂಸ್ವಾಧೀನಕ್ಕೆ ಸಂಬಂಧಿಸಿದ ಅಧಿಸೂಚನೆಗಳನ್ನು ಹಿಂಪಡೆಯಬೇಕು, ಕೃಷಿ ಭೂಮಿಯನ್ನು ಕೃಷಿ ಉದ್ದೇಶಕ್ಕೇ ಉಳಿಸಬೇಕು ಮತ್ತು ಅಭಿವೃದ್ಧಿ ಯೋಜನೆಗಳಿಗೆ ಕೃಷಿಯೋಗ್ಯವಲ್ಲದ ಸರ್ಕಾರಿ ಭೂಮಿಯನ್ನು ಬಳಸಬೇಕು ಎಂಬುದು ಅವರ ಪ್ರಮುಖ ಬೇಡಿಕೆಯಾಗಿದೆ. ರೈತರ ಒಪ್ಪಿಗೆಯಿಲ್ಲದೆ ಕೃಷಿ ಭೂಮಿ ಸ್ವಾಧೀನಪಡಿಸಿಕೊಳ್ಳಬಾರದು ಎಂಬ ಬೇಡಿಕೆಯನ್ನೂ ಅವರು ಮುಂದಿಟ್ಟಿದ್ದಾರೆ.

## ಗ್ರಾಪಂನಲ್ಲಿ ಹೋಬಳಿ ಮಟ್ಟದ 'ಪ್ರಜಾಸೇವೆ' ಆಂದೋಲನ ಸಭೆಗೆ ಡಿಸಿ ಚಾಲನೆ

# ಕಚೇರಿ ಅಲೆದಾಟ ತಪ್ಪಿಸಲು 'ಪ್ರಜಾಸೇವೆ' ಮನೆಬಾಗಿಲಿಗೆ ಆಡಳಿತ: ಡಿಸಿ



**ಬಳ್ಳಾರಿ, ಸೆ.26.**ಸಾಮಾನ್ಯ ಜನರು ತಮ್ಮ ಸಣ್ಣಪುಟ್ಟ ಸಮಸ್ಯೆಗಳಿಗೂ ನಗರದ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು'ಪ್ರಜಾಸೇವೆ' ಆಂದೋಲನ ಮೂಲಕ ಇಡೀ ಜಿಲ್ಲಾಡಳಿತವೇ ಜನರ ಮನೆಬಾಗಿಲಿಗೆ ಬಂದಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಅವರು ಹೇಳಿದರು.

'ಹೋಬಳಿ ಮಟ್ಟದ 'ಪ್ರಜಾಸೇವಾ ಆಂದೋಲನ ಸಭೆ' ಉದ್ಘಾಟಿಸಿ, ಸಾರ್ವಜನಿಕರಿಂದ ಸ್ವೀಕರಿಸಲಾಗುವ ಅರ್ಜಿಗಳಲ್ಲಿ ಸಾಧ್ಯವಾದಷ್ಟು ಸ್ಥಳದಲ್ಲೇ ಇತ್ಯರ್ಥ ಪಡಿಸಲಾಗುವುದು. ಹೆಚ್ಚಿನ ಪರಿಶೀಲನೆ ಅಗತ್ಯವಿರುವ ಅರ್ಜಿಗಳಿಗೆ ಕಾಲಮಿತಿ ನಿಗದಿಪಡಿಸಿ, ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಸ್ಥಳದಲ್ಲೇ ಆಲಿಸಿ ಶೀಘ್ರ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ವತಿಯಿಂದ ಹಮ್ಮಿಕೊಳ್ಳಲಾಗಿರುವ 'ಪ್ರಜಾಸೇವೆ ಆಂದೋಲನ' ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರು ಸಲ್ಲಿಸುವ ಯಾವುದೇ ಅರ್ಜಿಗಳು ಕಣ್ಮರೆಯಾಗದಂತೆ ನಿಗಾ ವಹಿಸಲು 'ಐಪಿಜಿಆರ್‌ಎಸ್' ಪೋರ್ಟಲ್‌ನಲ್ಲಿ ಪ್ರತಿಯೊಂದು ಅರ್ಜಿಯ ವಿವರಗಳನ್ನು ದಾಖಲಿಸಲಾಗುವುದು. ಅರ್ಜಿ ಸಲ್ಲಿಸಿದ ಪ್ರತಿಯೊಬ್ಬರಿಗೂ ಸ್ವೀಕೃತಿ ರಶೀದಿ ನೀಡಲಾಗುತ್ತಿದ್ದು, ಸಾರ್ವಜನಿಕರು ತಮ್ಮ ಅರ್ಜಿಯ ಪ್ರಗತಿಯನ್ನು ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ ಎಂದರು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ನಿಯಮಾನುಸಾರ ಕೇವಲ ಅಧಿಕಾರಿಗಳ ಸಮ್ಮುಖದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ನಾಗರಿಕರು ಸಂಯಮದಿಂದ ತಮ್ಮ ಅಹವಾಲುಗಳನ್ನು ಸಲ್ಲಿಸಬೇಕು, ಜನರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಲು ಸಂಪೂರ್ಣ ಜಿಲ್ಲಾಡಳಿತ ಬದ್ಧವಾಗಿದೆ.

ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲು ಕಂದಾಯ, ಗ್ರಾಮೀಣಾಭಿವೃದ್ಧಿ ಸೇರಿದಂತೆ ಎಲ್ಲಾ ಪ್ರಮುಖ ಇಲಾಖೆಗಳ ಪ್ರತ್ಯೇಕ ಮಳಿಗೆಗಳನ್ನು ತೆರೆಯಲಾಗಿತ್ತು. ಗ್ರಾಮಸ್ಥರು ಮುಖ್ಯವಾಗಿ ವೃದ್ಧಾಪ್ಯ ಮತ್ತು ವಿಧವಾ ಪಿಂಚಣಿ ಮಂಜೂರಾತಿ, ಗೃಹಲಕ್ಷ್ಮಿ ಯೋಜನೆ, ವಸತಿ ಸೌಲಭ್ಯ ಒದಗಿಸುವುದು ಹಾಗೂ ಸಿರಿವಾರ ಗ್ರಾಮದ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ನೇರವಾಗಿ ಅರ್ಜಿಗಳನ್ನು ಸಲ್ಲಿಸಿದರು.

ಅರ್ಜಿಗಳನ್ನು ಸ್ವೀಕರಿಸಿದ ಅಧಿಕಾರಿಗಳು, ಪ್ರತಿಯೊಂದು ಅಹವಾಲನ್ನು ಪರಿಶೀಲಿಸಿ ನಿಯಮಾನುಸಾರ ಹಾಗೂ ನಿಗದಿತ ಕಾಲಮಿತಿಯೊಳಗೆ ಸೂಕ್ತ ಕ್ರಮ ಕೈಗೊಂಡು ಇತ್ಯರ್ಥಪಡಿಸುವುದಾಗಿ ಸಾರ್ವಜನಿಕರಿಗೆ ಭರವಸೆ ನೀಡಿದರು.

# ಭಾಷಣಕ್ಕೆ ನಿರ್ಬಂಧ: ಕೇವಲ ಮೆರವಣಿಗೆಯಲ್ಲಿ ಪಾಲ್ಗೊಂಡು ವಾಪಸಾದ ನಟ ಪ್ರಕಾಶ್‌ರಾಜ್

**ಚಿಕ್ಕಬಳ್ಳಾಪುರ, ಸೆ.26:** ಜಿಲ್ಲೆಯ ಬಾಗೇಪಲ್ಲಿ ಪಟ್ಟಣದಲ್ಲಿ ಆಯೋಜಿಸಲಾಗಿದ್ದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಬಹುಭಾಷಾ ನಟ ಪ್ರಕಾಶ್‌ರಾಜ್ ಅವರ ಭಾಷಣಕ್ಕೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ನಾಗಮಣಿ ನಿರ್ಬಂಧ ಹೇರಿದ್ದಾರೆ.



ಕಾರ್ಯಕ್ರಮದ ಆಯೋಜಕರಿಂದ ಮುಚ್ಚಳಿಕೆ ಪತ್ರ ಬರೆಸಿಕೊಂಡ ಅಧಿಕಾರಿಗಳು, ಪ್ರಕಾಶ್ ರಾಜ್ ಅವರಿಗೆ ಮಾತನಾಡಲು ಅವಕಾಶ ನೀಡಲಿಲ್ಲ. ಇದರಿಂದಾಗಿ, ಸಮಾವೇಶಕ್ಕೆ ಆಗಮಿಸಿದ್ದ ನಟ ಪ್ರಕಾಶ್ ರಾಜ್ ಅವರು ಕೇವಲ ಮೆರವಣಿಗೆಗೆ ಚಾಲನೆ ನೀಡಿ, ಯಾವುದೇ ಭಾಷಣ ಮಾಡದೆ ವಾಪಸ್ ಚಿಕ್ಕಬಳ್ಳಾಪುರಕ್ಕೆ ತೆರಳಿದ್ದಾರೆ.

ಸ್ಥಳೀಯ ಅಧಿಕಾರಿಗಳ ಈ ದಿಢೀರ್ ನಡೆಗೆ DYFI ಸಮಾವೇಶದಲ್ಲಿ ತೀವ್ರ ಆಕ್ರೋಶ ಹಾಗೂ ಆಕ್ಷೇಪ ವ್ಯಕ್ತವಾಗಿದೆ.

ಸಾಂಸ್ಕೃತಿಕ ಹಾಗೂ ಯುವಜನ ಕಾರ್ಯಕ್ರಮದಲ್ಲಿ ನಟನ ಭಾಷಣಕ್ಕೆ ತಡೆಯೊಡ್ಡಿದ್ದನ್ನು ಆಯೋಜಕರು ಮತ್ತು ಸಾರ್ವಜನಿಕರು ತೀವ್ರವಾಗಿ ಖಂಡಿಸಿದ್ದಾರೆ.

ಅಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ಮುಚ್ಚಳಿಕೆ ಪತ್ರ ಪಡೆದು ಭಾಷಣಕ್ಕೆ ತಡೆ ನೀಡಿದ್ದರೂ, ಸಭೆಯಲ್ಲಿ ವಾತಾವರಣ ಬಿಸಿಯೇರಲು ಇದು ಕಾರಣವಾಯಿತು.




ಮೈಸೂರು ದಸರಾ ಚಟುವಟಿಕೆ: ಶನಿವಾರ ಮೈಸೂರಿನ ಜಂಬೂಸವಾರಿ ಮಾರ್ಗದಲ್ಲಿ ನಡೆದ ದೈನಂದಿನ ತಾಲೀಮಿನ ವೇಳೆ ಮೆರವಣಿಗೆಯಲ್ಲಿ ಕಂಡುಬಂದ ದಸರಾ ಆನೆಗಳು.

## ಮಂಗಳೂರು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ರ್‍ಯಾಗಿಂಗ್

# ಹಿರಿಯ ವಿದ್ಯಾರ್ಥಿಗಳಿಂದ ಇಬ್ಬರ ಮೇಲೆ ಬೆಲ್ಟ್‌ನಿಂದ ಹಲ್ಲೆ

**ಮಂಗಳೂರು, ಸೆ.26:** ಮಂಗಳೂರಿನ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಬಿಬಿಎ ಪ್ರಥಮ ವರ್ಷದ ಇಬ್ಬರು ವಿದ್ಯಾರ್ಥಿಗಳ ಮೇಲೆ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ರ್‍ಯಾಗಿಂಗ್ ಮಾಡಿ, ಅಮಾನುಷವಾಗಿ ಬೆಲ್ಟ್ ನಿಂದ ಹಲ್ಲೆ ನಡೆಸಿರುವ ಘಟನೆ ಬೆಳಕಿಗೆ ಬಂದಿದೆ.

ಕೇರಳ ಮೂಲದ ಬಿಬಿಎ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಐವರು ದ್ವಿತೀಯ ವರ್ಷದ ಕಾಲೇಜು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಇಬ್ಬರು ಪ್ರಥಮ ವರ್ಷದ ಬಿಬಿಎ ವಿದ್ಯಾರ್ಥಿಗಳು, ಸೆಪ್ಟೆಂಬರ್ 19 ರಂದು ಪಾಂಡೇಶ್ವರ ಪ್ರದೇಶದಲ್ಲಿರುವ ತಮ್ಮ ಕಾಲೇಜಿನ ಬಳಿ ನಡೆದುಕೊಂಡು ಹೋಗುತ್ತಿದ್ದಾಗ, ಹಿರಿಯ ವಿದ್ಯಾರ್ಥಿಗಳ ಗುಂಪೊಂದು ಅವರನ್ನು ಬೈಕ್‌ಗಳಲ್ಲಿ ಕರೆದೊಯ್ದಿತ್ತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.ಆರೋಪಿಗಳು ಆ ಇಬ್ಬರು ವಿದ್ಯಾರ್ಥಿಗಳನ್ನು ನಿರ್ಜನ ಪ್ರದೇಶವೊಂದಕ್ಕೆ ಕರೆದೊಯ್ದು, ಅವರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದೂರಿನ ಪ್ರಕಾರ, ವಿದ್ಯಾರ್ಥಿಗಳ ಬಟ್ಟೆ ಬಿಚ್ಚಿಸಿ, ಅವರ ಮೇಲೆ ಬೆಲ್ಟ್ ಹಾಗೂ ಇತರ ಲೋಹದ ಸರಳುಗಳು ಮತ್ತು ಪೈಪ್‌ಗಳಿಂದ ಹಲ್ಲೆ ನಡೆಸಲಾಗಿದೆ. ಅಲ್ಲದೆ ಈ ಘಟನೆಯ ಬಗ್ಗೆ ಕಾಲೇಜು ಆಡಳಿತ ಮಂಡಳಿಗೆ ಅಥವಾ ಪೊಲೀಸರಿಗೆ ದೂರು ನೀಡಿದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದಾರೆ.

ನಂತರ ಗಾಯಗೊಂಡ ವಿದ್ಯಾರ್ಥಿಗಳು ಮನೆಗೆ ಮರಳಿ, ತಮ್ಮ ಪೋಷಕರ ಸಹಾಯದೊಂದಿಗೆ ಪಾಂಡೇಶ್ವರ ಪೊಲೀಸರಿಗೆ ದೂರು ನೀಡಿದ್ದಾರೆ. ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಅವರ ಪ್ರಕಾರ, ಬಂಧಿತ ವಿದ್ಯಾರ್ಥಿಗಳನ್ನು ರಹಾನ್ ಎಂ.ಪಿ., ಮೊಹಮ್ಮದ್ ಉವೈಸ್, ಮೊಹಮ್ಮದ್ ಆದಿಲ್ ಯು.ಪಿ., ರೋಹನ್ ರಮೇಶ್ ಮತ್ತು ನಶೆದ್ ಅಮೀರ ಎಂದು ಗುರುತಿಸಲಾಗಿದೆ.ಇವರೆಲ್ಲರೂ 19 ವರ್ಷ ವಯಸ್ಸಿನವರಾಗಿದ್ದು, ಮಂಗಳೂರಿನ ಖಾಸಗಿ ಕಾಲೇಜೊಂದರಲ್ಲಿ ದ್ವಿತೀಯ ವರ್ಷದ ಬಿಬಿಎ ವ್ಯಾಸಂಗ ಮಾಡುತ್ತಿದ್ದಾರೆ.

ರಹಾನ್ ಮತ್ತು ರೋಹನ್ ಕೇರಳದ ಕಣ್ಣೂರು ಜಿಲ್ಲೆಯ ಪಯ್ಯನೂರಿನವರಾ ಗಿದ್ದರೆ, ಉವೈಸ್ ಕಾಸರಗೋಡಿನವರು, ಆದಿಲ್ ಕೋಯಿಕ್ಕೋಡ್‌ನವರು ಮತ್ತು ನಶೆದ್ ಕಣ್ಣೂರು ಜಿಲ್ಲೆಯವರು ಎಂದು ಪೊಲೀಸರು ತಿಳಿಸಿದ್ದಾರೆ.ಈ ಘಟನೆಯಲ್ಲಿ ಭಾಗಿಯಾಗಿರುವ ಇತರ ನಾಲ್ವರು ವಿದ್ಯಾರ್ಥಿಗಳಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದು, ಪ್ರಕರಣದ ತನಿಖೆ ಮುಂದುವರಿದಿದೆ.

# ಸುಸ್ಥಿರ ಸಮಾಜದ ಅಭಿವೃದ್ಧಿಯಲ್ಲಿ ಸ್ವಯಂಸೇವಾ ಸಂಸ್ಥೆಗಳ ಪಾತ್ರ ಅನನ್ಯ

**ಬಳ್ಳಾರಿ ಸೆ 26:** ಸುಸ್ಥಿರ ಸಮಾಜದ ಅಭಿವೃದ್ಧಿಯಲ್ಲಿ ಸೇವಾ ಮನೋಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳ ಪಾತ್ರ ಮತ್ತು ಕೊಡುಗೆ ಅನನ್ಯವಾದದ್ದು. ಸರ್ಕಾರದ ಜೊತೆ ಕೈಜೋಡಿಸಿ ಅಭಿವೃದ್ಧಿ ಪಾಲುದಾರ ರಾದ ಇವರು ಯಾವುದೇ ಪ್ರತಿಫಲಾಪೇಕ್ಷೆ ಬಯಸದೇ ಸೇವೆ ಮಾಡುತ್ತಿರುವುದು ಶ್ಲಾಘನೀಯ. ಜಿಲ್ಲೆಯಲ್ಲಿರುವ ಫೇವಾರ್ಡ್ -ಕೆ ಸದಸ್ಯ ಸ್ವಯಂ ಸೇವಾ ಸಂಸ್ಥೆಗಳಿಗೂ ಜಿಲ್ಲಾಡಳಿತ ಮತ್ತು ನಾಗರಿಕ ಸಮಾಜದ ಸಹಕಾರ ನೀಡುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ರಾಮಕೃಷ್ಣ ನಾಯಕ್ ಅವರು ತಿಳಿಸಿದರು.



ಹಿರಿಯ ನಾಗರಿಕರ ಹಾರೈಕೆ ಕೇಂದ್ರ "ನೆಮ್ಮದಿ" ಮತ್ತು ಮಕ್ಕಳ ಪಾಲನ ಕೇಂದ್ರ "ಕುಶಲ" ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿನ ದುರ್ಬಲರ ಏಳಿಗೆಗೆ ಮತ್ತು ಮಕ್ಕಳ ಸಂರಕ್ಷಣೆಗೆ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಫೇವಾರ್ಡ್ – ಕರ್ನಾಟಕ ಮತ್ತು ಡ್ರೀಮ್ ಇಂಡಿಯಾ ನೆಟ್ವರ್ಕಿನ ಸಹಯೋಗದಲ್ಲಿ ಪ್ರಾರಂಭವಾಗುತ್ತಿರುವ ನೆಮ್ಮದಿ ಮತ್ತು ಕುಶಲ ಕೇಂದ್ರಗಳು ಸರ್ಕಾರದ ನೈತಿಕ ನಿಬಂಧನೆಗಳಿಗೆ ಒಳಪಟ್ಟು ನಡೆಸುವಂತಾಗಲಿ. ಅದಕ್ಕೆ ಬೇಕಾಗುವ ಸಹಕಾರವನ್ನು ಇಲಾಖೆ ನೀಡುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಮಹಾನಗರ ಪಾಲಿಕೆ ಅಭಿಯಾನದ ವ್ಯವಸ್ಥಾಪಕ ಗುರು ಬಸವರಾಜ್ ಮಾತನಾಡಿ, ಫೇವಾರ್ಡ್ -ಕೆ ಒಕ್ಕೂಟವು ರಾಜ್ಯದಲ್ಲಿ ಬಲಿಷ್ಠವಾದ ಸ್ವಯಂಸೇವಾ ಸಂಸ್ಥೆಗಳ ಪ್ರಧಾನ ಸಂಸ್ಥೆ. ಕಳೆದ ನಾಲ್ಕು ದಶಕಗಳಿಂದ ಉತ್ತಮ ಕೆಲಸಗಳನ್ನು ನಿರ್ವಹಿಸಿಕೊಂಡು ಬರುತ್ತಿದೆ. ಸರ್ಕಾರದ ನೀತಿ ಮತ್ತು ಪಾಲನೆ ಬದಲಾವಣೆಗಳಲ್ಲಿ ಫೇವಾರ್ಡ್– ಕೆ ಒಕ್ಕೂಟವು ತನ್ನದೇ ಆದ ಪಾತ್ರಗಳನ್ನು ವಹಿಸಿಕೊಂಡುಬರುತ್ತಿದೆ. ಈ ದಿಸೆಯಲ್ಲಿ ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಮತ್ತು ಮಕ್ಕಳಾಗಿ ಉತ್ತಮವಾದಂತಹ ಬದುಕು ಮತ್ತು ಶೈಕ್ಷಣಿಕವನ್ನು ನೀಡಲು ಕೇಂದ್ರಗಳನ್ನು ಪ್ರಾರಂಭಿಸುತ್ತಿರುವುದು ಅಭಿನಂದನೀಯ. ಇಂತಹ ಉತ್ತಮ ಕೆಲಸಗಳು ಬಳ್ಳಾರಿ ಮಹಾನಗರ ಪಾಲಿಕೆ ಮೇಯರ್ ಹತ್ತಿರ ನೆರವು ಕೋರಿಕೊಂಡು ಬಂದಾಗ ಸಹಕಾರವಿರುತ್ತದೆ ಎಂದು ತಿಳಿಸಿದರು.

ಆಶಯ ನುಡಿಗಳನ್ನಾಡಿದ ಫೇವಾರ್ಡ್ -ಕೆ ಕಾರ್ಯಾಲಯದ ಕಾರ್ಯಕ್ರಮ ವ್ಯವಸ್ಥಾಪಕ ಕೃಷ್ಣಮೂರ್ತಿ ಎಂ ಎಸ್ ರವರು ಡ್ರೀಮ್ ಇಂಡಿಯ ನೆಟ್ವರ್ಕ್ ಮತ್ತು ಫೇವಾರ್ಡ್ -ಕೆ ಜಾರಿ ಮಾಡುತ್ತಿರುವ ಹಿರಿಯ ನಾಗರಿಕರ ಹಾರೈಕೆ ಕೇಂದ್ರ ನೆಮ್ಮದಿ ಮತ್ತು ಮಕ್ಕಳ ಪಾಲನ ಕೇಂದ್ರ ಕುಶಲ ಕೇಂದ್ರಗಳ ಉದ್ದೇಶ ಮತ್ತು ಯೋಜನೆ ಆರ್ಥಿಕ ಸಹಾಯ, ಸ್ವಯಂಸೇವಾ ಸಂಸ್ಥೆಗಳ ನಿರ್ವಹಿಸಬೇಕಾದ ಜವಾಬ್ದಾರಿ ಕಾನೂನು ನಿಯಮ ನಿಬಂಧನೆಗಳು ಪಾಲನೆ ಹಾಗೂ ಸಂಬಂಧಿಸಿದ ಇಲಾಖೆಗಳ ನಡುವೆ ಸಮನ್ವಯತೆಯಿಂದ ಕೇಂದ್ರಗಳನ್ನು ನಡೆಸುವ ರೀತಿಗಳ ಮಹತ್ವ ವಿವರಿಸಿದರು.

# ಪ್ರವಾಸೋದ್ಯಮದಿಂದ ಉದ್ಯೋಗಾವಕಾಶ ಸೃಷ್ಟಿ ಕಾನೂನು, ಸುವ್ಯವಸ್ಥೆ ಎಡಿಜಿಪಿ- ಆರ್. ಹಿತೇಂದ್ರ

**ವಿಜಯಪುರ, ಸೆ.26:** ವಿಜಯಪುರದ ಐತಿಹಾಸಿಕ ಪ್ರವಾಸಿ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುವುದರಿಂದ ಜಿಲ್ಲೆಯ ಆರ್ಥಿಕತೆಗೆ ಬಲ ಬರುವುದಲ್ಲದೇ, ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಆರ್. ಹಿತೇಂದ್ರ ಹೇಳಿದರು.



ನಗರದಲ್ಲಿರುವ ಸ್ಮಾರಕಗಳಿಂದಾಗಿ ವಿಜಯಪುರ ವಿಶ್ವಪ್ರಸಿದ್ಧಿ ಪಡೆದಿದೆ.ಪ್ರವಾಸಿಗರನ್ನು ಆಕರ್ಷಿಸಿ, ಈ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳು ತೆರೆದುಕೊಳ್ಳಲಿವೆ ಎಂದರು.

ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಮಾತನಾಡಿ, ವಿಜಯಪುರ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಪ್ರವಾಸಿಗರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಮಾರಕಗಳ ಸಂರಕ್ಷಣೆ, ಸೌಂದರ್ಯೀಕರಣ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ವಿವಿಧ ಯೋಜನೆಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಸ್ವದೇಶ ದರ್ಶನ ಯೋಜನೆ–2.0ರಡಿ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸ್ಮಾರಕ ದತ್ತು ಯೋಜನೆಯಡಿ ಐತಿಹಾಸಿಕ ತಾಜಬಾವಡಿ ಸ್ಮಾರಕವನ್ನು ಟಾಟಾ ಕನ್ಸಲ್ಟೆನ್ಸಿ ಫೌಂಡೇಷನ್ ಹಾಗೂ ವರ್ಲ್ಡ್ ಮಾನ್ಯುಮೆಂಟ್ ಫಂಡ್ಸ್ ಸಹಯೋಗ'ದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದ ಅವರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದಲೂ ಜಿಲ್ಲೆಯ ವಿವಿಧ ಸ್ಮಾರಕಗಳ ಸಂರಕ್ಷಣಾ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

# ಮೆಣಸಿನಕಾಯಿ ಬೆಳೆ ಆರಂಭಿಕ ಹಂತದ ರಕ್ಷಣೆಗೆ ಗೋದ್ರೆಜ್ ಗ್ರೇಸಿಯಾ

**ಬಳ್ಳಾರಿ, ಸೆ 26.** ಮೆಣಸಿನಕಾಯಿ ಬೆಳೆಗಾರರ ಪಾಲಿಗೆ ಸಾಮಾನ್ಯ ಇಳುವರಿ ಮತ್ತು ಅತ್ಯುತ್ತಮ ಇಳುವರಿಯ ನಡುವಿನ ವ್ಯತ್ಯಾಸವು ಸಾಮಾನ್ಯವಾಗಿ ನಾಟಿ ಮಾಡಿದ ಮೊದಲ ಕೆಲವೇ ವಾರಗಳಲ್ಲಿ ನಿರ್ಧಾರವಾಗುತ್ತದೆ. ಈ ಆರಂಭಿಕ ಹಂತದಲ್ಲಿ ಎದುರಾಗುವ ಕೀಟಗಳ ಬಾಧೆ, ಅದರಲ್ಲೂ ನುಸಿಯಂತಹ ಹೀರುವ ಕೀಟಗಳ ಉಪಟಳವು ಸಸಿಗಳ ಸುಸ್ಥಿರ ಬೆಳವಣಿಗೆಯ ಮೇಲೆ ತೀವ್ರ ಪರಿಣಾಮ ಬೀರಿ, ಒಟ್ಟಾರೆ ಇಳುವರಿಯ ಸಾಮರ್ಥ್ಯ ಕುಂಠಿತಗೊಳಿಸುತ್ತದೆ.





ಈ ಹಿನ್ನೆಲೆಯಲ್ಲಿ ಸಕಾಲಿಕ ಬೆಳೆ ರಕ್ಷಣೆ ಅತ್ಯಂತ ನಿರ್ಣಾಯಕವಾಗಿದೆ. ತೀವ್ರತರವಾದ ಕೀಟಬಾಧೆ ಸಂದರ್ಭಗಳಲ್ಲಿ ಶೇಕಡಾ 90 ರಷ್ಟು ಇಳುವರಿ ನಷ್ಟ ಉಂಟಾಗುವ ಸಾಧ್ಯತೆಗಳಿದ್ದು, ಇದು ಆರಂಭಿಕ ಹಂತದ ರಕ್ಷಣಾ ಕ್ರಮಗಳ ಅನಿವಾರ್ಯತೆಯನ್ನು ಬಿಂಬಿಸುತ್ತದೆ. ಈ ವಾಸ್ತವ ಮನಗಂಡು, ಭಾರತದ ಮುಂಚೂಣಿ ಅಗ್ರಿ–ಬಿಸಿನೆಸ್ ಸಂಸ್ಥೆಗಳಲ್ಲಿ ಒಂದಾದ ಗೋದ್ರೆಜ್ ಆಗ್ರೋವೆಟ್, ಮೆಣಸಿನ ಕಾಯಿ ಕೃಷಿಗಾಗಿ ರೂಪಿಸಲಾಗಿರುವ ಕೀಟನಾಶಕ ಗ್ರೇಸಿಯಾ ಮೂಲಕ ಆರಂಭಿಕ ಬೆಳೆ ಸಂರಕ್ಷಣೆಯ ಮಹತ್ವ ಕುರಿತು ರೈತರಲ್ಲಿ ಜಾಗೃತಿ ಮೂಡಿಸುತ್ತಿದೆ. ಸಸಿಗಳನ್ನು ನಾಟಿ ಮಾಡಿದ ಮೊದಲ 15 ರಿಂದ 25 ದಿನಗಳು ಆರೋಗ್ಯಕರ ಬೆಳೆಗೆ ಭದ್ರ ಬುನಾದಿ ನಿರ್ಮಿಸುವ ಸೂಕ್ಷ್ಮ ಅವಧಿಯಾಗಿದೆ. ಈ ಹಂತದಲ್ಲಿ, ಬಾಹ್ಯವಾಗಿ ಯಾವುದೇ ಹಾನಿಯ ಲಕ್ಷಣಗಳು ಕಣ್ಣಿಗೆ ಗೋಚರಿಸುವ ಮೊದಲೇ ನುಸಿ ನಂತಹ ಕೀಟಗಳು ಸಸ್ಯದ ಶಾರೀರಿಕ ಬೆಳವಣಿಗೆಗೆ ಧಕ್ಕೆ ತರಬಲ್ಲವು. ಸಕಾಲಿಕ ಮುನ್ನೆಚ್ಚರಿಕಾ ಕ್ರಮಗಳು ರೈತರಿಗೆ ಕೀಟಗಳ ಕಾಟವನ್ನು ಆರಂಭದಲ್ಲೇ ಹಿಮ್ಮೆಟ್ಟಿಸಲು ಮತ್ತು ಮೊದಲಿನಿಂದಲೇ ಉತ್ತಮ ಇಳುವರಿಯ ಸಾಮರ್ಥ್ಯ ಕಾಯ್ದುಕೊಳ್ಳಲು ನೆರವಾಗುತ್ತವೆ. ಪ್ರತಿ ಎಕರೆಗೆ 160 ಮಿಲಿಲೀಟರ್ ಪ್ರಮಾಣದಲ್ಲಿ ಸಿಂಪಡಿಸಲ್ಪಡುವ ಗ್ರೇಸಿಯಾದ ಟ್ರಾನ್ಸ್ ಲಾಮಿನಾರ್ (ಎಲೆಯ ಮೇಲ್ಮೈಯಿಂದ ಕೆಳಭಾಗಕ್ಕೆ ತೂರಿಕೊಳ್ಳುವ) ತಂತ್ರಜ್ಞಾನವು ಹೀರುವ ಹಾಗೂ ಕಚ್ಚಿ ತಿನ್ನುವ ಎರಡೂ ಬಗೆಯ ಕೀಟಗಳನ್ನು ನಿಯಂತ್ರಿಸುತ್ತದೆ.

ಮೆಣಸಿನಕಾಯಿ ಬೆಳೆಯಲ್ಲಿ ಆರಂಭಿಕ ಹಂತದ ರಕ್ಷಣೆಯ ಪಾತ್ರದ ಕುರಿತು ಮಾತನಾಡಿದ ಗೋದ್ರೆಜ್ ಆಗ್ರೋವೆಟ್ ಲಿಮಿಟೆಡ್‌ನ ಕ್ರಾಪ್ ಕೇರ್ ವಿಭಾಗದ ಸಿಇಓ ರಾಜವೇಲು ಎನ್.ಕೆ ಅವರು, "ಮೆಣಸಿನಕಾಯಿ ಕೃಷಿಯಲ್ಲಿ, ನಾಟಿ ಮಾಡಿದ ಆರಂಭಿಕ ವಾರಗಳು ಬೆಳೆಯ ಭವಿಷ್ಯದ ಇಳುವರಿ ಮತ್ತು ಬೆಳವಣಿಗೆಯ ಮೇಲೆ ಅಗಾಧ ಪ್ರಭಾವ ಬೀರುತ್ತವೆ. ಆದ್ದರಿಂದ ಸಸಿಗಳ ರಕ್ಷಣೆ ಹಾಗೂ ನಿರೀಕ್ಷಿತ ಇಳುವರಿ ಕಾಪಾಡಿಕೊಳ್ಳಲು ಆರಂಭಿಕ ಕೀಟ ನಿರ್ವಹಣೆ ಅತ್ಯಗತ್ಯ. ಹಾನಿಯ ಲಕ್ಷಣಗಳು ಹೊರಗೆ ಕಾಣಿಸಿಕೊಳ್ಳುವ ಮುನ್ನವೇ ಕೀಟಗಳ ಬಾಧೆಯನ್ನು ನಿಯಂತ್ರಿಸಿ, ಮುಂದಿನ ಇಡೀ ಹಂಗಾಮಿಗೆ ಭದ್ರವಾದ ಅಡಿಪಾಯ ಹಾಕಲು ರೈತರಿಗೆ ನೆರವಾಗುವುದೇ ಗ್ರೇಸಿಯಾ ಹಿಂದಿನ ಮೂಲ ಉದ್ದೇಶ" ಎಂದರು.

ನಾಟಿ ನಂತರದ ನಿರ್ಣಾಯಕ 15–25 ದಿನಗಳಲ್ಲಿ ಕೀಟಬಾಧೆ ನಿಗ್ರಹಿಸುವ ಮೂಲಕ, ಗ್ರೇಸಿಯಾ ಬೆಳೆ ಹುಲುಸಾಗಿ ನೆಲೆಗೊಳ್ಳಲು ಆಸರೆಯಾಗುತ್ತದೆ. ಇದರಿಂದ ಬೆಳೆಗಾರರು ತಮ್ಮ ಇಳುವರಿಯನ್ನು ಗರಿಷ್ಠಗೊಳಿಸಲು ಹಾಗೂ ಪೂರ್ಣ ಹಂಗಾಮಿನುದ್ದಕ್ಕೂ ಅಚಲ ಆತ್ಮವಿಶ್ವಾಸದೊಂದಿಗೆ ಕೃಷಿ ಮುಂದುವರಿಸಲು ಸಾಧ್ಯವಾಗುತ್ತದೆ.

# ಇಂದಿನ ಮಕ್ಕಳೇ ಭವಿಷ್ಯತ್ತಿನ ಆಶಾಕಿರಣ: ರಂಭಾಪುರಿಶ್ರೀ



**ಬಾಳೆಹೊನ್ನೂರು, ಸೆ.26:** ಸಜ್ಜನ ಸತ್ಪುರುಷರ ಸಂಗಮದಲ್ಲಿ ಬೆಳೆದು ಬಂದಾಗ ಬದುಕು ಉಜ್ವಲಗೊಳ್ಳುವುದು. ಧಾರ್ಮಿಕ ಮೌಲ್ಯಗಳ ಪುನರುತ್ಥಾನ ಮತ್ತು ಪರಿಪಾಲನೆಯಿಂದ ಜೀವನದಲ್ಲಿ ಸುಖ–ಶಾಂತಿ ಪ್ರಾಪ್ತವಾಗುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಇಂದು ಬೆಳೆಯುವ ಮಕ್ಕಳೇ ಭವಿಷ್ಯತ್ತಿನ ಆಶಾ ಕಿರಣಗಳು. ಬಾಲ್ಯದಲ್ಲಿ ಮಕ್ಕಳಿಗೆ ದೊರಕುವ ಸಂಸ್ಕಾರ ಶಿಕ್ಷಣಗಳು ಅವರ ಮುಂದಿನ ಜೀವನಕ್ಕೆ ಭದ್ರ ಬುನಾದಿಗಳಾಗಿವೆ ಎಂದರು.

ಬಿಸಿಯೂಟದ ಅಡುಗೆ ಮನೆ ಉದ್ಘಾಟಿಸಿದ ಮಾಜಿ ಸಚಿವ ಶಾಸಕ ಸಿ.ಸಿ.ಪಾಟೀಲ ಮಾತನಾಡಿ ರಂಭಾಪುರಿ ಜಗದ್ಗುರುಗಳ ಕ್ರಿಯಾಶೀಲತೆಯಿಂದಾಗಿ ರಂಭಾಪುರಿ ಪೀಠ ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತಿದೆ. ಅವರ ನಿರಂತರ ಪ್ರವಾಸದಲ್ಲಿಯೂ ಶ್ರೀಪೀಠದ ಅಭಿವೃದ್ಧಿಯ ಕಡೆಗೆ ಗಮನ ಹರಿಸಿ ಕಾರ್ಯ ನಿರ್ವಹಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯವೆಂದರು. ಈ ಸಂದರ್ಭದಲ್ಲಿ ಹುಡುಗಿ ಸೋಮೇಶ್ವರ ಶಿವಾಚಾರ್ಯರು, ಗೊಲ್ಲಾಳಪ್ಪಗೌಡ ಪಾಟೀಲ, ಗಂಗಾಧರಯ್ಯ, ರೇಣುಕಾಸ್ವಾಮಿ, ಚಂದ್ರಶೇಖರ್, ವೀರೇಶ ಕುಲಕರ್ಣಿ ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಇದಕ್ಕೂ ಪೂರ್ವದಲ್ಲಿ ಶಾಸಕ ಸಿ.ಸಿ.ಪಾಟೀಲರು ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ನಂತರ ಶ್ರೀ ರಂಭಾಪುರಿ ಜಗದ್ಗುರುಗಳನ್ನು ಭೇಟಿ ಮಾಡಿ ದರ್ಶನಾಶೀರ್ವಾದ ಪಡೆದರು.

# ದೆಹಲಿ ಕರ್ನಾಟಕ ಸಂಘ (ರಿ)

ರಾವ್ ತುಲಾರಾಮ್ ಮಾರ್ಗ, ಸೆಕ್ಟರ್-12, ಆರ್.ಕೆ.ಪುರಂ, ನವದೆಹಲಿ- 110 022

# ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್ (ರಿ) ನವದೆಹಲಿ

ಸಹಯೋಗದಲ್ಲಿ



# ಕಲ್ಯಾಣ ಕರ್ನಾಟಕ ಉತ್ಸವ

## ಸಾಂಸ್ಕೃತಿಕ ಕಾರ್ಯಕ್ರಮಗಳು

## ಕಲ್ಯಾಣ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ

**ದಿನಾಂಕ:** 27-09-2026, ಭಾನುವಾರ,
ಸಂಜೆ-4.30 ಗಂಟೆಗೆ, **ಸ್ಥಳ:** ಸಂಘದ ಸಭಾಂಗಣ

# ಕಲ್ಯಾಣ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ



ಮಾತೋಶ್ರೀ ಪೂಜ್ಯ
**ಡಾ.ದಾಕ್ಷಾಯಿಣಿ ಎಸ್. ಅಪ್ಪ**
ಅಧ್ಯಕ್ಷರು, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ

### ಗೌರವ ಉಪಸ್ಥಿತಿ

**ಶ್ರೀ ಬಸವರಾಜ ಎಸ್.ದೇಸಳ್ಳಿ**
ಜನರಲ್ ಮ್ಯಾನೇಜರ್
ಕರ್ನಾಟಕ ಬ್ಯಾಂಕ್.ಲಿ.
ಪ್ರಾದೇಶಿಕ ಕಚೇರಿ ನವದೆಹಲಿ

**ಡಾ. ಅಲ್ಲಮಪ್ರಭು ಗುಡ್ಡ**
ಅಧ್ಯಕ್ಷರು, ಆಯುರ್ವೇದ ಮಂಡಳಿ,
ಆಯುಷ್ ಮಂತ್ರಾಲಯ,
ಭಾರತ ಸರ್ಕಾರ




**ಡಾ.ಗುರುಲಿಂಗಪ್ಪ ಎಂ.ಪಾಟೀಲ**
ವಿಶ್ರಾಂತ ಸಹ ಉಪಕುಲಪತಿಗಳು
ದೆಹಲಿ, ಎನ್.ಸಿ.ಆರ್

### ದೆಹಲಿ ಎನ್‌ಸಿಆರ್‌ನ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು



ಹಾಸ್ಯ ಕಾರ್ಯಕ್ರಮ
**ಡಾ.ಬೆಣ್ಣೆ ಬಸವರಾಜ**



ಸಂಗೀತ ಸಂಜೆ
**ಕು.ಭೂಮಿಕಾ ಗಡಾದ**
ಫೈನಲ್ ಸ್ಪರ್ಧಿ-ಝೀ ಕನ್ನಡ
ವಾಹಿನಿಯ ಸ.ರಿ.ಗ.ಪ.ಸೀಸನ್ 21



**ರೇಣುಕುಮಾರ್ ಆರ್.**
ಅಧ್ಯಕ್ಷರು
ದೆಹಲಿ ಕರ್ನಾಟಕ ಸಂಘ (ರಿ)

## ತಮಗೆಲ್ಲರಿಗೂ ಆತ್ಮೀಯ ಸುಸ್ವಾಗತ

**ಡಾ.ಎಸ್.ಎಲ್ ಭಂಡಾರಕರ್**
ಅಧ್ಯಕ್ಷರು, ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್(ರಿ)

**ರಾಜಕುಮಾರ ನೀಲೂರ**
ಅಧ್ಯಕ್ಷರು, ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್(ರಿ)



**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ
ದೆಹಲಿ ಕರ್ನಾಟಕ ಸಂಘ (ರಿ)